ಸದಸ್ಯರ ಅಭಿಪ್ರಾಯ. ಆದರೆ ನಾನು ಸ್ಪಷ್ಟಪಡಿಸುತ್ತೇನೆ. ಮಾನ್ಯ ಸದಸ್ಯರು ಕರ್ನಾಟಕ ಕ್ರಾಂತಿರಂಗಕ್ಕೆ ಸೇರಿದವರು. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಅನೇಕ ಕಡೆಗಳಲ್ಲಿ ನಾವೂ ಕೂಡ ಗೆದ್ದು ಬಂದಿದ್ದೇವೆ, ಇದು ನಮ್ಮ ಸ್ನೇಹಿತರೆಲ್ಲರಿಗೂ ಗೊತ್ತು. ಮಾನ್ಯ ಸದಸ್ಯರು ಕರ್ನಾಟಕ ಕ್ರಾಂತಿರಂಗದ ಅಭ್ಯರ್ಥಿಯಾಗಿ ಗೆದ್ದು ಬಂದಿದ್ದಾರೆ ಎಂದು ಮಾತ್ರ ನಾನು ಇಲ್ಲಿ ಹೇಳುತ್ತಿದ್ದೇನೆ. ಆದರೆ ಅವರು ಜನತಾ ಪಕ್ಷಕ್ಕೆ ಹೋಗಿದ್ದಾರೆ ಎಂದು ಹೇಳತಕ್ಕಂಥಾದ್ದು ಬೇರೆ ಪ್ರಶ್ನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಅವರಿಗೆ ಜನತಾ ಪಕ್ಷದ ಟಿಕೆಟ್ ಕೊಡುವುದಕ್ಕೆ ಮಾಡಿದ್ದರು. ಅವರಿಗೆ ಪಕ್ಷದ ಚಿಹ್ನೆ ತಲುಪುವುದು ತಡವಾಯಿತು. ನಾನು ಈ ವಿಷಯದಲ್ಲಿ ಜನತಾ ಪಕ್ಷಕ್ಕೆ ಸಂಬಂಧಪಟ್ಟಂತಹವರನ್ನು ಕೇಳಿ ತಿಳಿದುಕೊಂಡಿದ್ದೇನೆ, ಅವರು ಕ್ರಾಂತಿರಂಗದ ಸದಸ್ಯರಾಗಿ ನಿಲ್ಲಲಿಲ್ಲ. ಅವರು ಪಕ್ಷೇತರರಾಗಿ ನಿಂತು ಗೆದ್ದು ಬಂದಿದ್ದಾರೆ. ಜನತಾ ಪಕ್ಷದ ಅಭ್ಯರ್ಥಿಯನ್ನಾಗಿ ಅವರನ್ನು ಆರಿಸಿದ್ದು 'ಚಿಹ್ನೆ' ಸಕಾಲಕ್ಕೆ ಅವರಿಗೆ ದೊರಕದೇ ಇದ್ದದ್ದಕ್ಕಾಗಿ ಅವರು ಕ್ರಾಂತಿರಂಗದ ಸದಸ್ಯರಾದರು ಎಂದೂ ಕೆಲವರು ಹೇಳುತ್ತಾರೆ ಅದು ಸರಿಯಲ್ಲ.

ಅಧ್ಯಕ್ಷರು.—ಆ ವಿಷಯ ನನಗೆ ಸಂಬಂಧಿಸಿಲ್ಲ. ಅವರು ಜನತಾ ಪಕ್ಷಕ್ಕೆ ಸೇರಿದ್ದೇನೆ ಎಂದೂ ನನಗೆ ಪತ್ರ ಬರೆದುಕೊಂಡಿದ್ದಾರೆ, ಅದನ್ನು ಇಲ್ಲಿ ನಾನು ಹೇಳಿದ್ದೇನೆ. ಆಮೇಲೆ ಮಾನ್ಯ ವೀರಪ್ಪ ಮೊಯಿಲಿಯವರು ಕಳಿಸಿರತಕ್ಕಂಥ ನಿಲುವಳಿ ಸೂಚನೆ ಬಂದಿದೆ. ಈ ವಿಚಾರವನ್ನು ಮಾನ್ಯ ವಿರೋಧ ಪಕ್ಷದವರು ಈಗ ಏನು ನಾವು ಗಮನಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇವೆ ಆ ಸಂದರ್ಭದಲ್ಲಿ ಮಾತನಾಡಿದರೆ ಸಾಕು.

ನಿಲುವಳಿ ಸೂಚನೆ

ಬಳ್ಳಾರಿ ಪೋಲೀಸ್ ಠಾಣೆಯಲ್ಲಿ ಒಬ್ಬ ವಂಹಿಳೆಯ ಮೇಲೆ ಅತ್ಯಾಚಾರ ನಡೆಯಿತು ಎನ್ನುವ ದೂರು ಬಗ್ಗೆ

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಪ್ರಶ್ನೆ, ತಾವು ಅನುಮತಿಸಿ ಅವಕಾಶ ಕೊಟ್ಟರೆ ಈ ವಿಚಾರ ನಿಲುವಳಿ ಸೂಚನೆಗೆ ಯಾವ ರೀತಿಯ ಅರ್ಹತೆ ಪಡೆದಿದೆ ಎಂಬ ವಿಚಾರವನ್ನು ತಮಗೆ ಮನವರಿಕೆ ಮಾಡುತ್ತೇನೆ.

ಅಧ್ಯಕ್ಷರು.—ತಾವು ನನಗೆ ಮನವರಿಕೆ ಮಾಡುವುದಕ್ಕೆ ಮುಂಚೆ ತಾವು ಕಳುಹಿಸಿರತಕ್ಕ ನೋಟಿಸ್ ನಲ್ಲಿ ತಾಂತ್ರಿಕ ದೋಷವಿದೆ, ಅದನ್ನೇ ಎತ್ತಿಹಿಡಿಯತಕ್ಕದ್ದು ನನ್ನ ಉದ್ದೇಶ ಅಲ್ಲ. ಹೊಸ ನಿಯಮಗಳ ಪ್ರಕಾರ ತಾವು ಕಳುಹಿಸತಕ್ಕಂಥಹ ನಿಲುವಳಿ ಸೂಚನೆ ಅಧ್ಯಕ್ಷರು, ಕಾರ್ಯದರ್ಶಿ, ಮತ್ತು ಸಂಬಂಧ ಸಂಬಂಧಪಟ್ಟ ಮಂತ್ರಿಗಳಿಗೆ ಹೋಗಬೇಕಾಗಿತ್ತು. ತಾವು ಕಾರ್ಯದರ್ಶಿಯವರಿಗೆ ಕಳುಹಿಸಿ ಅಲ್ಲಿಗೆ ನಿಲ್ಲಿಸಿದ್ದೀರಿ. ತಾಂತ್ರಿಕ ದೋಷವಿದೆ ಎಂದು ನಿಲುವಳಿ ಸೂಚನೆಯನ್ನು ತಡೆಹಿಡಿಯುತಕ್ಕಂತಪದ್ದು ನನ್ನ ಉದ್ದೇಶ ಇಲ್ಲ. ಆದ್ದರಿಂದ ಈ ದಿವಸ ಗಮನ ಸೆಳೆಯುವ ಸೂಚನೆಯ ಜೊತೆಯಲ್ಲಿಯೇ ಇದರ ಬಗ್ಗೆ ಮಾತನಾಡಬಹುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಗಮನಸೆಳೆಯುವ ಸೂಚನೆಯು ಕಾರ್ಯಸೂಚಿಯಲ್ಲಿ ಕಾಣಿಸಿದ್ದೀರಿ. ಅದನ್ನು ನಾನು ನೋಡಿದ್ದೇನೆ. ಪ್ರಶ್ನೆ ಅದಲ್ಲ, ಇದು ಗಂಭೀರವಾದಂತಹ ಪ್ರಶ್ನೆ. ಸದನದ ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿರಿಸಿ ಚರ್ಚೆ ಮಾಡತಕ್ಕಂತಹ ವಿಚಾರವಿದೆ. ಆದ್ದರಿಂದ ನಿಲುವಳಿ ಸೂಚನೆಯೆಂದು ನಾನು ಕಳುಹಿಸಿದ್ದೇನೆ. ತಮಗೆಲ್ಲಾ ಗೊತ್ತಿದೆ, ತಾವು ಬಹಳ ಪರಿಣತರಿದ್ದೀರಿ. ಲೋಕಸಭೆಯಲ್ಲಿ ಕೂಡ ಇಂತಹ ವಿಚಾರಗಳನ್ನು ನೋಡಿದ್ದೀರಿ. ಗಮನಸೆಳೆಯುವ ಸೂಚನೆಯ ಅಡಿಯಲ್ಲಿ ವ್ಯಾಪಕವಾಗಿ ಚರ್ಚೆಮಾಡುವುದಕ್ಕೆ ಆಗುವುದಿಲ್ಲ. ಇದು ಗಂಭೀರವಾದಂತಹ ಪ್ರಶ್ನೆ ಇದೆ. ಆದ್ದರಿಂದ ಗಮನ ಸೆಳೆಯುವ ಸೂಚನೆಗೆ ಬದಲಾಗಿ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ಈ ವಿಚಾರವನ್ನು ತಂದಿದ್ದೇನೆ. ಅದಕ್ಕೆ ಬೇಕಾದಂತಹ ಅರ್ಹತೆಗಳು ಇವೆ. ಅಧ್ಯಕ್ಷರಿಗೆ ಕಳುಹಿಸಬೇಕಾಗಿತ್ತು ಹಾಗೆ ಹೀಗೆ ಎಂದು ಹೇಳುವುದು ಸರಿಯಲ್ಲ. ಜನಗಳ ಮನಸ್ಸಿನಲ್ಲಿ ಸಂಕೋಚ ಮತ್ತು ಇದರ ಬಗ್ಗೆ ಸಂಶಯಗಳು ಇವೆ. ಈ ಬಗೆ ಮಾನ್ಯ ಮುಖ್ಯಮಂತ್ರಿಗಳು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿ

ದ್ದಾರೆ. ಅನೇಕ ಸದಸ್ಯರು ಈ ಬಗ್ಗೆ ಏನು ಅಭಿಪ್ರಾಯಂಗಳನ್ನು ವ್ಯಕ್ತ ಮಾಡಿದ್ದಾರೆಂಬುದು ಈಗಾಗಲೆ ಹೊರಗೆ ಬಂದಿದೆ. ಅದಕ್ಕೆ ಯಾವ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಂಡಿಲ್ಲ. ವಾಸ್ತವಿಕವಾಗಿ ಈ ವಿಚಾರದಲ್ಲಿ ನೀಲುವಳಿ ಸೂಚನೆಗೆ ಸ್ವೀಕಾರ ಮಾಡುವುದೂ ಬಿಡುವುದು ತಮಗೆ ಬಿಟ್ಟಿದ್ದು. ಇದಕ್ಕೆ ಸಾಕಷ್ಟು ಕಾರಣಗಳಿವೆ. ತಾವು ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಟ್ಟರೆ ಇದರಿಂದ ತಮಗೆ ಮನವರಿಗೆ ಮಾಡಿಕೊಡಲಿಕ್ಕೆ ಮತ್ತು ಸಾರ್ವಜನಿಕರಿಗೆ ನ್ಯಾಯ ದೊರಕಿಸಲಿಕ್ಕೆ ಈ ನಿಲುವಳಿ ಸೂಚನೆಯು ಮುಖ್ಯಾಂತರ ಸಾಧ್ಯವಾಗುತ್ತದೆ. ಆದರೆ ಗಮನ ಸೆಳೆಯುವ ಸೂಚನೆಯು ಮುಖ್ಯಾಂತರ ಮಹತ್ವವಾದ ವಿಚಾರಗಳ ಬಗ್ಗೆ ಸರಿಯಾದಂತಹ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಇದರಿಂದ ಜನತೆಗೆ ಸರಿಯಾದ ನ್ಯಾಯ ಸಿಗುವುದಿಲ್ಲ.

ಅಧ್ಯಕ್ಷರು.—ತಾವು ವಾದ ಮಾಡುವುದಕ್ಕೆ ನಿಯಮ ೬೧ರ ಪ್ರಕಾರ ಈ ರೀತಿ ಇದೆ.

"Notice of an Adjournment Motion shall be given before the commencement of the sitting on the day on which the Motion is proposed to be made to each of the following;

(i) the Speaker,

(ii) the Minister concerned, and

(iii) the Secretary.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾಂತ್ರಿಕ ಕಾರಣಗಳನ್ನು ಕೊಟ್ಟು ಮುಂಖ್ಯವಾದ ವಿಚಾರವನ್ನು ಬದಿಗೊತ್ತುವುದಕ್ಕೆ ಹೋದರೆ ನ್ಯಾಯ ಸಿಗುವುದಿಲ್ಲ. ನಿಲುವಳಿ ಸೂಚನೆಗೆ ಬೇಕಾದಂತಹ ಅರ್ಹತೆಗಳು ಇವೆ.

ಶ್ರೀ ಜೆ.ಎಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ನಿಯಮ ೬೩ರ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲ.

"No Motion which seeks to raise discussion on a matter pending before any statutory tribunal or statutory authority performing any judicial or quasi-judicial functions or court of enquiry appointed to enquire into or investigate any such matter shall ordinarily be permitted to be moved.

Provided that the Speaker may in his discretion allow such matter being raised in the House as is concerned with the procedure or subject or stage of enquiry if the Speaker is satisfied that it is not likely to prejudice the consideration of such matter by the statutory tribunal, statutory authority, Commission or court of enquiry'.

ಆದ್ದರಿಂದ ೬೩ನೇ ನಿಯಮದ ಪ್ರಕಾರ ಈಗಾಗಲೇ ಸರ್ಕಾರ ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದೆ. ಸದನದ ಕಾರ್ಯಕಲಾಪದ ಪಟ್ಟಿಯಲ್ಲಿ ಗಮನ ಸೆಳೆಯುವ ಸೂಚನೆಯ ಪ್ರಕಾರ ಪ್ರಸ್ತಾಪ ಮಾಡಬಹುದು. ಈ ವಿಷಯವನ್ನು ನ್ಯಾಯಾಂಗ ವಿಚಾರಣೆಗೆ ಒತ್ತುಪಡಿಸಿರುವುದರಿಂದ ಸದನದ ಮುಂದೆ ಪ್ರಸ್ತಾಪ ಮಾಡುವುದು ಕಾನೂನಿಗೆ ಬದ್ಧವಾಗಿರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಂಪುಟದರ್ಜೆಯ ಸಚಿವರು ವಿಷಯವನ್ನು ಗಮನಕ್ಕೆ ತೆಗೆದುಕೊಂಡ ಹಾಗೆ ಇಲ್ಲ. ೬೩ರ ನಿಯಮದ ವಿಚಾರ ನಾನು ಹೇಳುತ್ತಿಲ್ಲ. ಆದಕ್ಕೆ ಇದು ಅನ್ವಯವಾಗುವುದಿಲ್ಲ. ಯಾವ ವಿಚಾರವನ್ನು ನ್ಯಾಯಾಂಗ ವಿಚಾರಣೆ ಆಗಬೇಕೆಂದು ಹೇಳಿದ್ದಾರೋ ಅದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಮಾಡಬೇಕು. ನನ್ನ ತಿಳುವಳಿಕೆಯ ಪ್ರಕಾರ ನ್ಯಾಯಾಂಗ ವಿಚಾರಣೆ

ಮಾಡುತ್ತೇವೆಂದು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿದ್ದೇ ಹೊರತು, ಈ ಬಗ್ಗೆ ಸರ್ಕಾರ ನ್ಯಾಯಾಂಗ ವಿಚಾರಣೆ ಮಾಡಲು ಆಪ್ಪಣೆ ಮಾಡಿಲ್ಲ. ಸಂಪುಟ ದರ್ಜೆಯ ಸಚಿವರಿಗೆ ಈ ವಿಚಾರ ತಿಳುವಳಿಕೆ ಇಲ್ಲದೇ ಇರುವುದಕ್ಕೆ ಕಾರಣವೇನೆಂದು ಗೊತ್ತಾಗಲಿಲ್ಲ. ಇದಕ್ಕೆ ನಾನು ವ್ಯಸನಪಡಬೇಕಾಗಿದೆ. ಇದು ಪತ್ರಿಕೆಗಳಲ್ಲಿ ಬಂತೆ ವಿನಹ, ನ್ಯಾಯಾಂಗ ವಿಚಾರಣೆ ಮಾಡಲು ಸರ್ಕಾರ ಇನೂ ಆಜ್ಞೆ ಮಾಡಿಲ್ಲ.

ಅಧ್ಯಕ್ಷರು.—ಅವರಿಗಿಂತ ಸರ್ಕಾರದ ವಿಚಾರಗಳು ತಮಗೆ ಹೆಚ್ಚಾಗಿ ಗೊತ್ತಾಗಿರುವಂತಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಗೊತ್ತಿನೆ, ನ್ಯಾಯಾಂಗ ತನಿಖೆ ಮಾಡಲು ಸರ್ಕಾರ ಹುಕುಂ ಕೊಟ್ಟಿಲ್ಲ ; ನ್ಯಾಯಾಧೀಶರ ನೇಮಕ ಮಾಡಿಲ್ಲ. ಎರಡನೆಯದಾಗಿ ಪೋಲೀಸ್ ಠಾಣೆಯಲ್ಲಿ ಏನು ಅತ್ಯಾಚಾರ ನಡೆಯಿತು ಆ ಬಗ್ಗೆ ಕೂಡ ಎಫ್.ಐ.ಆರ್.....

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ತಾವು ಈಗಾಗಲೇ ೬೧ನೇ ನಿಯಮಾವಳಿಯನ್ನು ವಿರೋಧಪಕ್ಷದ ನಾಯಕರ ಗಮನಕ್ಕೆ ತಂದಿದ್ದೀರಿ. ನಿಯಮ ೬೧ರ ಪ್ರಕಾರ ನೋಟೀಸ್ ಕೊಟ್ಟಿದ್ದರೂ, ಗಂಭೀರವಾದಂತಹ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಕೂಡದು ಎನ್ನುವ ಅಭಿಪ್ರಾಯ ಅಲ್ಲ. ಈಗಾಗಲೇ ಮಾನ್ಯ ಸದಸ್ಯರಾದಂತಹ ಎಂ.ಎಸ್ ಕೃಷ್ಣನ್‌ರವರು ಗಮನ ಸೆಳೆಯುವ ಸೂಚನೆಯ ಮುಖಾಂತರ ನೋಟೀಸ್ ಕೊಟ್ಟಿದ್ದಾರೆ, ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಆದಕ್ಕೆ ಅವಕಾಶವಿದೆ ಅದರ ಬಗ್ಗೆ ಸರ್ಕಾರ ಉತ್ತರ ಕೊಡುವುದಕ್ಕೆ ಅವಕಾಶವಿದೆ. ವಿಷಯವನ್ನು ಗಮನ ಸೆಳೆಯುವ ಸೂಚನೆಯ ಮುಖಾಂತರ ಚರ್ಚೆ ಮಾಡುವುದಕ್ಕೆ ಮಾನ್ಯ ಸದಸ್ಯರಾದ ಕೃಷ್ಣನ್‌ರವರಿಗೆ ಅವಕಾಶ ಕೊಟ್ಟು, ವಿರೋಧ ಪಕ್ಷದ ನಾಯಕರಿಗೆ ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಿಯಮಕ್ಕೆ ವಿರೋಧವಾಗುತ್ತದೆ. ತಾವು ಏನಾದರೂ ಅವರು ಚರ್ಚೆ ಮಾಡುವುದಕ್ಕೆ ಆಪ್ಪಣೆ ಕೊಟ್ಟರೆ ನಿಯಮವನ್ನು ಮಿಾರಿದಂತಾಗುತ್ತದೆ.

ಅಧ್ಯಕ್ಷರು.—ನಾನು ವಿಷಯವನ್ನು ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ತಂದಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—Don't plead your ignorance ಬಳ್ಳಾರಿಯ ಘಟನೆಯಾದ ಮೇಲೆ ಸದನ ಮೊದಲನೆಯದಾಗಿ ಸೇರುತ್ತಿದೆ. ಇದು ಗಂಭೀರವಾದಂತಹ ವಿಚಾರ. ಮುಖ್ಯಮಂತ್ರಿಗಳು ಬಳ್ಳಾರಿಗೆ ಹೋದಂತಹ ಸಂದರ್ಭದಲ್ಲಿ ನ್ಯಾಯಾಂಗ ವಿಚಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಕಳೆದ ತಿಂಗಳು ೧೯ನೇ ತಾರೀಖು ಹೇಳಿಕೆ ಕೊಟ್ಟಿದ್ದಾರೆ. ಇವತ್ತು ೧೦ನೇ ತಾರೀಖು ಆದರೂ ಕೂಡ ಯಾವುದೇ ರೀತಿಯ ಕ್ರಮವನ್ನು ತೆಗೆದುಕೆ ಂಡಿಲ್ಲ. ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆಯೋ ಎನ್ನುವ ಆನುಮಾನ ಬಂದಿದೆ, ಜನರ ಮನಸ್ಸಿನಲ್ಲಿ ಒಂದು ಕುತೂಹಲ, ಸಂಶಯ ಬಂದಿದೆ ಅದನ್ನು ಪರಿಹಾರ ಮಾಡಬೇಕು. ಈ ವಿಷಯ ತಪ್ಪು ಗಮನಕ್ಕೆ ಬಂದಿಲ್ಲವೆಂದು ಇದನ್ನು ಗಮನಸೆಳೆಯುವ ಸೂಚನೆಯ ಮುಖಾಂತರ ಚರ್ಚೆ ಮಾಡಿದರೆ ಸ್ಪಷ್ಟವಾದ ವಿಚಾರಗಳು ಹೊರ ಬೀಳುವುದಿಲ್ಲ. ನಿಲುವಳಿ ಸೂಚನೆಯ ಮೇರೆಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಈ ವಿಚಾರ ಸರ್ಕಾರಕ್ಕೆ ಗೊತ್ತಿಲ್ಲದೆ ಇಲ್ಲ, ಮಾನ್ಯ ಜೆ. ಎಚ್. ಪಟೇಲ್‌ರವರು ತಿಳಿದುಕೊಂಡಿಲ್ಲದೆ ಇರಬಹುದು ಅಥವಾ ಅವರಿಗೆ ತಿಳಿದಿರಲೂಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಜವಾಬ್ದಾರಿಯಿಂದ ನೋಟೀಸ್ ಕೊಡಬೇಕು. ಈ ಪಂಚೆಯ ವಿರೋಧಪಕ್ಷದ ನಾಯಕರಾಗಿ ಜವಾಬ್ದಾರಿಯಿಂದ ಮಾತನಾಡುವಾಗ, ತಾವು ಜವಾಬ್ದಾರಿಯಿಂದ ನಡೆದುಕೊಂಡಿಲ್ಲ. ಮಾನ್ಯ ಎಂ. ಎಸ್. ಕೃಷ್ಣನ್‌ರವರ ಗಮನಸೆಳೆಯುವ ಸೂಚನೆ ಸದನದ ಮುಂದೆ ಇದೆ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ನಿಮಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿಯಿಂದ ಸರ್ಕಾರ ಉತ್ತರ ಕೊಡಬೇಕಾಗುತ್ತದೆ.

೧-೦೦ ಪಿ. ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಂತಹ ಉತ್ತರ ನಮಗೆ ಬೇಕಾಗಿಲ್ಲ. ಈಗ ನಿಲುವಳಿ ಸೂಚನೆ ಬಗ್ಗೆ ಗಂಭೀರವಾದ ಈ ವಿಷಯದ ಬಗ್ಗೆ ಚರ್ಚೆಯಾಗಬೇಕು. ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ತೆಗೆದುಕೊಳ್ಳುವುದನ್ನು ಬಿಟ್ಟು ಬೇರೆ ರೂಪದಲ್ಲಿ ತೆಗೆದುಕೊಂಡರೆ ಅದು ತನ್ನ ಗಂಭೀರತೆಯನ್ನು ಕಳೆದು

ಕೊಳ್ಳುತ್ತದೆ. ಬಳ್ಳಾರಿಯ ಘಟನೆ ನಡೆದ ಮೇಲೆ ಇವತ್ತು ಸದನ ಮೊಟ್ಟ ಮೊದಲಂ ಸೇರಿರುವಾಗ ಜನ ಏನು ನಿರೀಕ್ಷಣೆ ಮಾಡುತ್ತಾರೆಂದರೆ, ಸದನ ಈ ವಿಚಾರದಲ್ಲಿ ಏನು ಮಾಡುತ್ತದೆ, ಯಾವ ರೀತಿ ತೀರ್ಮಾನಕ್ಕೆ ಬರುತ್ತದೆ ಮತ್ತು ನ್ಯಾಯವಾಗಿ ತನಿಖೆ ವಿಚಾರದಲ್ಲಿ ಸರ್ಕಾರ ಏನು ಹೇಳುತ್ತದೆ ಎಂದು. ಜವಾಬ್ದಾರಿಯುತವಾದ ಸರ್ಕಾರ ಇದನ್ನು ಯಾವ ರೀತಿ ಪರಿಹಾರ ಮಾಡುತ್ತದೆ ಎಂದು ಜನ ಇವತ್ತು ನಿರೀಕ್ಷಣೆ ಮಾಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಸರ್ಕಾರದಿಂದ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಇದು ಸಂಪೂರ್ಣವಾಗಿ ಗಂಭೀರವಾದಂಥ ವಿಚಾರ. ಸಾಮಾನ್ಯವಾದ ತಾಂತ್ರಿಕ ದೋಷವನ್ನು ಮುಂದೊಡ್ಡಿ, ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಇನ್ಯಾವ ರೂಪದಲ್ಲಿ ಈ ವಿಚಾರವನ್ನು ಸಂಪೂರ್ಣವಾಗಿ ಚರ್ಚೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ?

ಒಬ್ಬ ಮಾನ್ಯ ಸದಸ್ಯರು.—ದಯಮಾಡಿ ಮಾನ್ಯ ಅಧ್ಯಕ್ಷರು ಈ ಬಗ್ಗೆ ರೂಲಿಂಗ್ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ವಿರೋಧಪಕ್ಷದ ನಾಯಕರು ರೂಲ್ಸಿನ ಬಗ್ಗೆ ಮಾತನಾಡುತ್ತಾ, ಅದರ ಮಹತ್ವವನ್ನು ಕಡಿಮೆಮಾಡುವ ರೀತಿಯಲ್ಲಿ ಮಾತನಾಡಿದರು ಎಂದು ನನಗೆ ಅನಿಸುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಗಮನ ಸೆಳೆಯುವ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಿಲ್ಲವೇ : ಹೇಗೆ ಮಹತ್ವ ಕಡಿಮೆಯಾಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ನೀವು ನಿಲುವಳಿ ಸೂಚನೆಯನ್ನು ತೆಗೆದುಕೊಂಡರೆ ನಮ್ಮ ಗಮನ ಸೆಳೆಯುವ ವಿಷಯದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ ಎಂದು ನನಗೆ ಗೊತ್ತಿದೆ. ನನ್ನ ಪ್ರಶ್ನೆ ಏನೆಂದರೆ, ಈ ನಿಯಮಗಳನ್ನು ಶ್ರೀಮಾನ್ ವೀರಪ್ಪ ಮೊಯ್ಲಿಯವರು ಮಂತ್ರಿಗಳಾಗಿದ್ದಾಗ ಈ ಸಭೆ ಮಾಡಿರುವುದು, ಆಗ ಮಾನ್ಯ ರಂಗನಾಥ್‌ರವರು ಸಭಾಧ್ಯಕ್ಷರಾಗಿದ್ದರು. ಆಗ ತಲೆ ಓಡಿಸಿದಿರಿ, ಆಮೇಲೆ ಇದನ್ನು ಯೋಚನೆ ಮಾಡಿದಿರಿ. ಈಗ ಹೊಸ ಹೊಸ ಪದ್ಧತಿ ಬಂದಿದೆ, ಪರಿಸ್ಥಿತಿ ಬಂದಿದೆ. ಈ ನಿಯಮಗಳನ್ನು ನೀವೆಲ್ಲಾ ಸೇರಿ ಮಾಡಿರುವಂಥಾದ್ದು. ಹೀಗಿರಬೇಕಾದರೆ, ಅದನ್ನು ತಾಂತ್ರಿಕವಾಗಿ ಏಕೆ ತೆಗೆದುಕೊಂಡಿರಿ ಎಂದು ಹೇಳಿದರೆ ಅದು ಔಚಿತ್ಯವಲ್ಲ. ಆದರೂ ಸಹ ಅದನ್ನು ತಾಂತ್ರಿಕವಾಗಿ ನೋಡದೆ ಯೋಚನೆ ಮಾಡಿ ಪರಿಶೀಲನೆ ಮಾಡಿ ಎಂದು ಹೇಳಿದಿರಿ. ಅದುದರಿಂದ ಇದನ್ನು ಪರಿಸಮಾಪ್ತಿಗೊಳಿಸಿ, ಈ ಬಗ್ಗೆ ತಾವು ತೀರ್ಮಾನಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂತಹ ಗಂಭೀರವಾದ ವಿಚಾರದ ಬಗ್ಗೆ ನೋಟೀಸ್ ಕೊಡಲಿಕ್ಕೆ ಸಮಯ ಸಿಗಲಿಲ್ಲ ಅಂದರೆ ಇದರ ಬಗ್ಗೆ ತಮಗೆ ಎಷ್ಟು ಗಂಭೀರತೆ ಇದೆ, ಮಹತ್ವವಿದೆ ಎನ್ನುವುದು ಗೊತ್ತಾಗುತ್ತದೆ. ಟೆಕ್ನಿಕಾಲಿಟಿಸ್‌ನಿಂದ ಈ ವಿಚಾರ ಚರ್ಚೆ ಆಗಬಾರದು ಎಂದು ನನಗಂತೂ ಇಲ್ಲ. ವಿಷಯ ಈಗಾಗಲೇ ಪ್ರಸ್ತಾಪವಾಗಿದೆ. ಮಾನ್ಯ ಸದಸ್ಯರಿಗೆ ಗಮನ ಸೆಳೆಯುವುದಕ್ಕೆ ಅವಕಾಶವಿದೆ, ಸರ್ಕಾರಕ್ಕೆ ಉತ್ತರ ಕೊಡತಕ್ಕ ಜವಾಬ್ದಾರಿ ಇದೆ. ಆದ್ದರಿಂದ ಅದನ್ನು ತೆಗೆದುಕೊಂಡರೆ ಒಳ್ಳೆಯದು.

ಶ್ರೀ ವೈ. ರಾಮಕೃಷ್ಣ.—ನಿಲುವಳಿ ಸೂಚನೆಯನ್ನು ನಾವು ಇಟ್ಟುಕೊಂಡು ಚರ್ಚೆ ಮಾಡುವಾಗ ಆಮೇಲೆ ಉತ್ತರ ಕೊಡುತ್ತೇವೆಂದರೆ ಹೇಗೆ ? ಸರ್ಕಾರದಲ್ಲಿ ಉತ್ತರ ಕೊಡಲು ತಯಾರಾಗಿದೆ. ತಾಂತ್ರಿಕ ದೋಷವಿದೆಯೆಂದು ಸನ್ಮಾನ್ಯ ಅಧ್ಯಕ್ಷರು ಹೇಳುತ್ತಾ ಇದ್ದಾರೆ. ಈ ವಿಷಯ ಬಹಳ ಗಹನವಾದುದು, ಈ ಬಗ್ಗೆ ಸನ್ಮಾನ್ಯ ಅಧ್ಯಕ್ಷರಿಗೆ ನೋಟೀಸ್ ಕೊಟ್ಟಿದೆ, ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ಈ ವಿಚಾರವನ್ನು ಎತ್ತಿದ್ದರಿಂದ ಇದರಲ್ಲಿ ಅಡ್ಡಿ ಏನು ಬರುತ್ತದೆ ?

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಯಿದೆ. ಸುಮ್ಮನೆ ಕಾಲಹರಣ ಮಾಡುವ ಬದಲು ಅದನ್ನೇ ತೆಗೆದುಕೊಂಡರೆ ಒಳ್ಳೆಯದು,

SRI Y. RAMAKRISHNA.—Until the Adjournment Motion is over, the question cannot be taken up.

MR. SPEAKER.—Can we not think of discussing it in any other form ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ನಿಲುವಳಿ ಸೂಚನೆಗೆ ಅರ್ಹತೆಯಿಲ್ಲವೆಂದು ಹೇಳಿ ತಳ್ಳಿ ಹಾಕಿದರೆ ಅದು ಪ್ರತ್ಯೇಕ. ಆದರೆ ಎಷ್ಟರಮಟ್ಟಿಗೆ ಅರ್ಹತೆ ಇದೆ ? ಹಿರಿಯೇ ನಿಯಮದ ಪ್ರಕಾರ ಸಬ್‌ಸ್ಟಾ ನ್ಟೀವ್ ರಿಪ್ಟಿಕ್ಷನ್ ಇರುವಂಥಾದ್ದು ಇದರಮಟ್ಟಿಗೆ ಬರುವುದಿಲ್ಲ. ಸೂಚನೆ ಏಕೆ ಕೊಡುವುದು ಅಂದರೆ ಗಮನ ಸೆಳೆಯುವುದಕ್ಕೆ ನಿಲುವಳಿ ಸೂಚನೆಗೆ ತಗಾದೆಯಿಲ್ಲದೆ ನಿಯಮ ಹಿರಿ ಪರಿಮಿತಿಯಲ್ಲಿ ಚರ್ಚೆ ಮಾಡಬೇಕೇ ಹೊರತು ತಾಂತ್ರಿಕದೋಷವಿದೆಯೆಂದು ತಡೆಹಿಡಿದರೆ ಗಂಭೀರವಾದ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಇರತಕ್ಕ ಅವಕಾಶವನ್ನು ಪೊಟಕುಮಾಡಿದಂತಾಗುತ್ತದೆ. ಸಾಮಾನ್ಯವಾದಂಥ ವಿಚಾರವನ್ನು ಮುಂದೆ ತಂದು ಗಂಭೀರವಾದ ವಿಷಯವನ್ನು ಚರ್ಚೆ ಮಾಡುವುದಕ್ಕೆ ಇರತಕ್ಕ ಅವಕಾಶವನ್ನು ಪೊಟಕುಗೊಳಿಸುವುದಿದ್ದರೆ ನಮ್ಮ ರಕ್ಷಣೆಗೆ ಯಾರು ಬರಬೇಕು ? ಗಮನ ಸೆಳೆಯುವ ಸೂಚನೆ ಮೂಲಕ ಈ ವಿಷಯವನ್ನು ವಿಂಡಿತವಾಗಿಯೂ ವಿಸ್ತಾರವಾಗಿ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ ; ಸಾಕಷ್ಟು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಆಗುವುದಿಲ್ಲ. ಗಮನ ಸೆಳೆಸುವ ಸೂಚನೆ ಮೂಲಕ ಸಾಕಷ್ಟು ಚರ್ಚೆ ಮಾಡುವುದಿದ್ದರೆ ನಿಜವಾಗಿಯೂ ವಿಷಯದ ಗಹನತೆಗೆ ಅದರಿಂದ ಸಾಕಷ್ಟು ತೊಂದರೆ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಯಾವುದೇ ಕಲಮ್ಮಿನ ಕೆಳಗಡೆ ಈ ವಿಷಯವನ್ನು ಮಾನ್ಯ ಸದಸ್ಯರು ಚರ್ಚೆ ಮಾಡಲಿಕ್ಕೆ ಬಯಸಿದರೂ ಅದರ ಗಹನತೆ ಬಹಳ ಸಣ್ಣದಾಗುತ್ತದೆ. ಏಕೆಂದರೆ, ಈಗಾಗಲೇ ನಾವು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೇವೆ. ಮಾನ್ಯ ಮೊಯ್ಲಿಯವರು ಮಾತನಾಡುತ್ತಾ, ಸರ್ಕಾರದವರು ನ್ಯಾಯಾಂಗ ತನಿಖೆ ಬಗ್ಗೆ ಬರೀ ಪತ್ರಿಕಾ ಪ್ರಕಟಣೆಯನ್ನು ಕೊಟ್ಟಿದ್ದಾರೆ ; ಅದು ಆಗಿದೆಯೋ ಇಲ್ಲವೋ ಎಂಬ ಅನುಮಾನವನ್ನು ವ್ಯಕ್ತಪಡಿಸಿದರು. ಆದರೆ ಹೇಳುವುದೊಂದು, ಮಾಡುವುದೊಂದು ಈ ಸರ್ಕಾರದಿಂದ ಆಗುವುದಿಲ್ಲ. ಅವರಿಗೆ ಸಾಕಷ್ಟು ಅನುಭವವಿದೆ.

ಶ್ರೀ ಜೆ. ಹೆಚ್. ಪಟೀಲ್.—ಈಗ ಅವರನ್ನು ಕಂಡು ನನಗೆ ತುಂಬಾ ವ್ಯಸನವಾಗುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ನ್ಯಾಯಾಂಗ ತನಿಖೆ ಆಗಬೇಕಾದರೆ ಒಂದು ನಿಯಮವಿದೆ. ನಾವು ಇವತ್ತು ಹೇಳಿದರೆ ಇವತ್ತಿನಿಂದಲೇ ನ್ಯಾಯಾಂಗ ತನಿಖೆ ರಚನೆ ಆಗುವುದಿಲ್ಲ. ನಾವು ಹೈಕೋರ್ಟಿಗೆ ಬರೆಯಬೇಕಾಗುತ್ತದೆ, ಅದನ್ನು ಒಪ್ಪಿದ್ದೇವೆ. ಅವರು ಯಾವ ಜಡ್ಜನ್ನು ನೇಮಕ ಮಾಡುತ್ತಾರೋ ಅದು ಅವರಿಗೆ ಸೇರಿದ್ದು. ಅವರು ನೇಮಕ ಮಾಡುವುದು ತಡವಾದರೆ ಅದು ನಮ್ಮ ತಪ್ಪಲ್ಲ. ಈ ಬಗ್ಗೆ ನಾವು ನಿರ್ಧಾರ ತೆಗೆದುಕೊಂಡಿದ್ದೇವೆ. ಅಲ್ಲಿ ಏನು ಘಟನೆ ನಡೆಯಿತು ಅದರ ಮೆರಿಟ್ ಮೇಲೆ ಚರ್ಚೆ ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಪೊಟಕುಗೊಳಿಸುವ ಉದ್ದೇಶ ನಮಗಿಲ್ಲ. ಇವರ ನಿಲುವಳಿ ಸೂಚನೆ ಬರುವುದಕ್ಕೆ ಮೊದಲು ಗಮನ ಸೆಳೆಯುವ ಸೂಚನೆ ಬಂದಿದೆ, ಅದನ್ನು ತಾವು ಒಪ್ಪಿಕೊಂಡಿದ್ದೀರಿ ; ಈಗ ಹೆಚ್ಚು ಮಾಡುವುದಕ್ಕೆ ಮಾಡುತ್ತಾರೋ ಗೊತ್ತಿಲ್ಲ. ಇದರಲ್ಲಿ ಮುಚ್ಚು ಮರೆ ಏನೂ ಇಲ್ಲ. ಈ ಘಟನೆ ನಾಚಿಕೆಗೇಡಿನ ಘಟನೆ. ಅದನು ಮುಚ್ಚು ಮರೆ ಮಾಡಲಿಕ್ಕೆ ಬಯಸುವುದಿಲ್ಲ. ಅದನ್ನು ತಪ್ಪಿಸಬೇಕು, ಅದರಿಂದ ತಪ್ಪಿಸಿಕೊಳ್ಳಬೇಕು, ಹಾರಿಸಿಕೊಳ್ಳಬೇಕು ಎನ ತಕ, ಉದ್ದೇಶ ನಮ್ಮದೂ ಇಲ್ಲ. ನ್ಯಾಯಾಂಗ ತನಿಖೆ ಮಾಡಬೇಕು ಎಂಬ ನಿರ್ಣಯವನ್ನು ತೆಗೆದುಕೊಂಡರೆ ಅದರ ಬಗ್ಗೆ ಕೂಲಂಕುಷವಾದ ಚರ್ಚೆಗೆ ಅವಕಾಶವಿಲ್ಲ. ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ಗಮನ ಸೆಳೆಯುವ ಸೂಚನೆಯನ್ನು ಒಪ್ಪಿಕೊಂಡಿದ್ದೀರಿ, ಆದರಲ್ಲಿ ಈ ಘಟನೆ ಬಗ್ಗೆ ಮಾತ್ರ ನಾಲ್ಕು ಮಾತು ಗಳನ್ನಾ ಮಾನ್ಯ ಸದಸ್ಯರು ಆಡಬಹುದು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಕಾನೂನಿನ ಚೌಕಟ್ಟಿನಲ್ಲಿ ನಾವೆಲ್ಲಾ ಇದನ್ನು ಕಳುಹಿಸಬೇಕಾಗುತ್ತದೆ. ಕಾನೂನು ನಿಮಗೆ ಒಂದು ನಮಗೊಂದು ಇಲ್ಲ ಎಲ್ಲರಿಗೂ ಒಂದೆ. ನೀವು ನನಗೆ ತೋರಿಸುತ್ತಾ ಇದ್ದೀರಿ ಅದನ್ನೇ ಈಗ ನಾನು ತಮ್ಮ ಕಡೆಗೆ ತೋರಿಸಬೇಕಾದ ಪರಿಸ್ಥಿತಿ ಬಂದಿದೆ. ವಿಷಯದ ಬಗ್ಗೆ ಚರ್ಚೆ ಮಾಡತಕ್ಕಂಥ ಅವಕಾಶವಿದೆ. ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದಾರೆ. ವಿಷಯವನ್ನು ಪ್ರಸ್ತಾಪಮಾಡಿದರೆ ಸಾಕಾಗುತ್ತದೆ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಎರಡನೆಯದಾಗಿ ಹೇಳುವುದಾದರೆ, ಇದರ ಬಗ್ಗೆ ಹಿಂದೆ ಅನೇಕ ಸಲ ನಡೆದಿರತಕ್ಕಂಥ ಚರ್ಚೆಗಳ ಬಗ್ಗೆ ಸಹ ಮಾನ್ಯ ಮಿತ್ರರು ನೆನಪು ಮಾಡಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಅವರಿಗೆ ಅದರ ಪೂರ್ಣ

ನೆನಪು ಇದೆಯೆಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ಹೇಳುವಾಗ ದೊಡ್ಡ ಚರ್ಚೆಯಾಗುತ್ತದೆ, ಪುಂಖಾನುಪುಂಖವಾಗಿ, ವಾದವಿವಾದಗಳು ಪರ್ವತದ ಶ್ರೇಣಿಯೋಪಾದಿಯಲ್ಲಿ ನಡೆದ ವಿಚಾರಗಳು ಇವೆ. ಆದರೆ ಈಗಾಗಲೇ ತಾವು ಕೇಳುವುದಕ್ಕಿಂತ ಮೊದಲೇ ನಮ್ಮ ಸರ್ಕಾರದವರು ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ಕೇಳಿ ತೀರ್ಮಾನ ತೆಗೆದುಕೊಂಡಿದೆ, ಅದಕ್ಕೆ ಸರಿಯಾದ ನ್ಯಾಯ ಮೂರ್ತಿಗಳನ್ನು ನೇಮಕ ಮಾಡಬೇಕಾಗಿರುವುದು ಹೈಕೋರ್ಟಿನವರ ಜವಾಬ್ದಾರಿಯಾಗಿದೆ. ಅವರಿಂದ ವಿಳಂಬವಾಗಿದೆಯೇ ಹೊರತು ಇದು ನಮ್ಮಿಂದ ವಿಳಂಬವಾಗಿಲ್ಲ, ಇದನ್ನು ನಾವು ಅತ್ಯಂತ ತ್ವರಿತವಾಗಿಯೇ ಮಾಡಿದ್ದೇವೆ. ಆದುದರಿಂದ ತಾವು ಸಮಾಧಾನದಿಂದ, ಚಿತ್ತ ಸಾವಧಾನದಿಂದ ನಮ್ಮ ಸರ್ಕಾರದವರು ತೆಗೆದುಕೊಂಡಿರತಕ್ಕ ನಿಲವು ಏನಿದೆ ಅದಕ್ಕೆ ಬೆಂಬಲ ಕೊಡಬೇಕೆಂದು ಮಾನ್ಯ ಸ್ನೇಹಿತರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಾನು ಮತ್ತು ನಮ್ಮ ಕ್ರಾಂತಿರಂಗದ ಮಾನ್ಯ ಸದಸ್ಯರುಗಳು ಸಹ ನಿಲುವಳಿ ಸೂಚನೆಯನ್ನು ಈ ವಿಷಯದ ಬಗ್ಗೆ ಕಳುಹಿಸಿ ಕೊಟ್ಟಿದ್ದೇವೆ. ಬಳ್ಳಾರಿ ಘಟನೆಯ ಬಗ್ಗೆ ಮತ್ತು ವಿಜಾಪುರ, ಚನ್ನರಾಯಪಟ್ಟಣ ಘಟನೆ ಬೇರೆ–ಅದಕ್ಕೆ ಪ್ರತ್ಯೇಕವಾಗಿ ನೋಟೀಸ್‌ಗಳನ್ನು ಕಳುಹಿಸಿ ಕೊಟ್ಟಿದ್ದೇವೆ. ಒಂದು ವಿಚಾರದ ಬಗ್ಗೆ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಏತಕ್ಕೆಂದರೆ ಅವರು ನ್ಯಾಯಾಂಗ ತನಿಖೆಗೆ ನಾವು ತಯಾರಾಗಿದ್ದೇವೆ ಎಂದು ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳವರು ಬಳ್ಳಾರಿಗೆ ಹೋದಾಗ ಹೇಳಿರತಕ್ಕದ್ದು ಎಲ್ಲಾ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಆವರು ಅಲ್ಲಿಗೆ ಹೋದ ಮಾರನೆಯ ದಿವಸ ನನ್ನ ಕೆಲವು ಶಾಸಕ ಮಿತ್ರರು ನನ್ನ ಜೊತೆಯಲ್ಲಿ ಬಳ್ಳಾರಿಗೆ ಬಂದಿದ್ದರು, ನಾವು ಅಲ್ಲಿಗೆ ಮತ್ತು ವಿಜಾಪುರಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇವೆ. ಇದು ಒಂದು ಕಡೆ ಇರಲಿ. ಇನ್ನು ನಿಯಮಾವಳಿಗಳ ಪ್ರಕಾರ ಹೇಳುವುದಾದರೆ ಈ ಹೊಸ ನಿಯಮಾವಳಿಗಳ ಪುಸ್ತಕವನ್ನು ನಾನು ನೋಡಿಯೇ ಇರಲಿಲ್ಲ. ಈಗ ತಾನೇ ನಮ್ಮ ಮಿತ್ರರಿಂದ ಪುಸ್ತಕವನ್ನು ತೆಗೆದುಕೊಂಡು ಓದಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದಿನ ನಿಯಮಾವಳಿಗಳ ಪ್ರಕಾರವಾಗಿ ೨ ಗಂಟೆಯ ಮುಂಚಿತವಾಗಿ ನೋಟೀಸ್‌ನ್ನು ಕೊಡಬೇಕಾಗಿತ್ತು ಈಗ ಅದು ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಪಾರ್ಲಿಮೆಂಟಿನಲ್ಲೂ ಕೂಡ ಇದೇ ತರಹ ನಿಯಮಾವಳಿ ಇದೆ ಅದಕ್ಕೂ ಇದಕ್ಕೂ ಏನೂ ವ್ಯತ್ಯಾಸವಿಲ್ಲ. ಅದಕ್ಕಿಂತಲೂ ಇದು ಇನ್ನೂ ಸ್ವಲ್ಪ ಉತ್ತಮವಾಗಿದೆ. ಹಿಂದೆ ಎರಡು ಗಂಟೆಗಳ ಮುಂಚಿತವಾಗಿ ನೋಟೀಸ್ ಕೊಡಬೇಕೆಂದಿತ್ತು. ಈಗ ಒಂದು ನಿಮಿಷ ಮುಂಚಿತವಾಗಿ ಕೊಟ್ಟರೂ ಸಾಕು ಇಲ್ಲಿ ಚರ್ಚೆಗೆ ಬರುತ್ತದೆ. ಹೊಸ ನಿಯಮಾವಳಿಗಳ ಪ್ರಕಾರವಾಗಿ ನೋಟೀಸ್‌ನ್ನು ನಮ್ಮ ಕಾರ್ಯಾಲಯದ ಕಾರ್ಯದರ್ಶಿಯವರಿಗೂ ಮತ್ತು ಸಂಬಂಧಪಟ್ಟ ಸಚಿವರಿಗೂ ಕಳುಹಿಸಿ ಕೊಡಬೇಕು ಎನ್ನುತಕ್ಕದ್ದನ್ನು ಈಗತಾನೇ ನೋಡಿದೆ ತಾವು ಕೂಡ ಹೇಳಿದ್ದು ಗೊತ್ತಾಯಿತು. ಇನ್ನು ರೂಲ್ ೬೩ರ ಪ್ರಕಾರ ಮಾನ್ಯ ಶ್ರೀ ಜೆ. ಎಚ್. ಪಟೇಲ್‌ರವರು ಪ್ರಸ್ತಾಪ ಮಾಡಿ ಹೇಳಿದರು ಸ್ಪಾಟ್‌ಚ್ಚುಟರಿ ಬಾಡಿ ಬಂದಾಗ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲವೆಂದು, ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳವರೂ ಕೂಡ ಹೇಳಿದ್ದಾರೆ. ಇದರ ಬಗ್ಗೆ ತೀರ್ಮಾನವನ್ನು ಸರ್ಕಾರದವರು ಏನೋ ತೆಗೆದುಕೊಂಡಿದ್ದಾರೆ ಆದರೆ ಮುಂದಿನ ಕ್ರಮವನ್ನು ಹೈಕೋರ್ಟಿನವರು ತೆಗೆದುಕೊಳ್ಳಬೇಕಾಗಿದೆ ಆದೊಂದು ಹಂತದಲ್ಲಿ ಇದೆ. For Judicial Enquiry you will have to get the Services of any one of the Judges of the High Court for which the Government will have to write to the High Court. According to the Chief Minister, theGovernment has already written to the High Court... ಎನ್ನುತಕ್ಕ ಮಾತನ್ನು ಹೇಳಿದ್ದಾರೆ. ಆದರೆ ನಮ್ಮ ಮುಂದಿರತಕ್ಕ ಪ್ರಶ್ನೆ ಇಷ್ಟು. ನ್ಯಾಯಾಂಗ ವಿಚಾರಣೆ ಮಾಡಲಿಕ್ಕೆ ಒಬ್ಬ ನ್ಯಾಯಾಧೀಶರು ಯಾರು ಇರುತ್ತಾರೆ ಅವರ ಮುಂದೆ ಎಲ್ಲಾ ಟಪ್ಸ್ ಆಫ್ ರೆಫರೆನ್ಸ್ ಹೋಗಬೇಕಾಗುತ್ತದೆ. ಆದರೆ ಅದು ಇನ್ನೂ ಹೋಗಿದೆಯೋ ಇಲ್ಲವೋ ಎನ್ನುವ ವಿಚಾರ ಗೊತ್ತಿಲ್ಲ. ಆದರ ಅರ್ಥವೇನು ಎಂದರೆ ಸರ್ಕಾರದ ಬಂದು ಆಜ್ಞೆಯಾಗಿ ಇಂಥವರೇ ಜಡ್ಜ್ ಇಂಥವರ ಮುಂದೆ ನಾವು ವಿಚಾರವನ್ನು ಇಟ್ಟಿದ್ದೇವೆ ಎಂದು ಹೇಳುವವರಿಗೆ It will not pending before the Judicial Enquiry Committee ಸ್ಪಾಟ್‌ಚುಟರಿ provision is not attracted here. I would like to make this distinction. It is a very clear distinction.

ಆದುದರಿಂದ ಮಾನ್ಯ ಮುಖ್ಯಮಂತ್ರಿಗಳವರು ಏನಾದರೂ ಇಂಥವರೇ ಜಡ್ಜ್‌ನ್ನು ನೇಮಕ ಮಾಡಿದ್ದೇ ವೆಂದು ಅಭಿಪ್ರಾಯ ಪಡುವುದಾದರೆ ನಿಜವಾಗಿಯೂ ರೂಲ್ ೬೩ ಅಟ್ರಾಕ್ಟ್ ಆಗಿದೆ. ಆದುದರಿಂದ ಇದರ ಬಗೆ ಏನಾದರೂ ಸರ್ಕಾರಿ ಆಜ್ಞೆಯಾಗಿದೆಯೇ ? ಇವತ್ತಿನವರೆಗೂ ಟ್ರಿಬ್ಯೂನಲ್ ಮಾಡಿಲ್ಲ. ಆಜ್ಞೆ ಆಗುವವರೆಗೂ ನಿಯಮ ೬೩ ಅಟ್ರಾಕ್ಟ್ ಆಗುವುದಿಲ್ಲ. ಒಂದು ವೇಳೆ ಹಾಗೆ ಏನಾದರೂ ಆಗಿದ್ದರೂ ಕೂಡ ಪ್ರಾವಿಜನ್ ನೋಡಿದರೆ ಗೊತ್ತಾಗುತ್ತದೆ. ಹಾಗೆ ಒಂದು ವೇಳೆ ಆಗಿದ್ದರೂ ಕೂಡ ಇಲ್ಲಿ ಅವಕಾಶ ಮಾಡಿಕೊಡುವುದಕ್ಕೆ ಮಾನ್ಯ ಅಧ್ಯಕ್ಷರಿಗೆ ಕಾನೂನಿನ ಪ್ರಕಾರ ಅವಕಾಶ ಇದೆ. ೬೩ ರೂಲ್‌ನಲ್ಲಿಯೇ ಅವಕಾಶವನ್ನು ಇಟ್ಟಿದ್ದಾರೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಬಿಡುವುದು ನಿಮಗೆ ಬಿಟ್ಟಿರತಕ್ಕ ವಿಚಾರ. ಏನೇ ಆದರೂ ಈಗಿನ ಸಂದರ್ಭದಲ್ಲಿ ಆ ರೀತಿ ಎಲ್ಲೂ ಇಲ್ಲ. ಆದುದರಿಂದ ಈ ವಿಚಾರವನ್ನು ನಿಯಮಾವಳಿ ೬೩ ಅಡ್ಡಿ ಬರುತ್ತದೆ ಎನ್ನತಕ್ಕ ಕಾರಣದ ಮೇಲೆ ತಡೆಹಿಡಿಯುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಅಭಿಪ್ರಾಯವನ್ನು ಅಧ್ಯಕ್ಷರಿಗೂ ಮತ್ತು ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೂ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರು ಒಂದು ಮಾತನ್ನು ಹೇಳಿದರು ನೀವು ಆ ಕಡೆ ಕುಳಿತಿದ್ದೀರಿ. ನಾವು ಈ ಕಡೆ ಕುಳಿತಿದ್ದೇವೆಂದು. ಈ ಗೋಲೀಬಾರ್ ಘಟನೆ ನಡೆದಾಗ ಮತ್ತಿತರ ಘಟನೆ ನಡೆದಾಗ ಜ್ಯುಡಿಶಿಯಲ್ ಎನ್‌ಕ್ವೈರಿ ನಡೆಸಬೇಕು ಎನ್ನುವ ಬಗ್ಗೆ ಅನೇಕ ಸಲ ನಾವು ಸಹ ಈ ಕಡೆ ಮಂತ್ರಿ ಈ ಕಡೆ ಕುಳಿತು ಚರ್ಚೆ ಮಾಡಿದ್ದೇವೆ. ಆದುದರಿಂದ ನೀವು ಆ ಕಡೆ ಕುಳಿತಿದ್ದೀರಿ. ನಾವು ಈ ಕಡೆ ಕುಳಿತಿದ್ದೇವೆ ಎಂದು ಮಾತನಾಡುವುದು ಅಷ್ಟು ಸರಿಯಾಗಿ ಕಾಣಿಸುವುದಿಲ್ಲ. ಆದುದರಿಂದ ಈ ವಿಚಾರ ಇನ್ನೂ ಟ್ರಿಬ್ಯೂನಲ್ ಮುಂದೆ ಇಲ್ಲದೇ ಇರುವುದರಿಂದ, ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಕೊಟ್ಟರೆ ಅನೇಕ ಮಾಹಿತಿಗಳನ್ನು ಈ ಸದನಕ್ಕೆ ಮತ್ತು ಸಾರ್ವಜನಿಕರಿಗೂ ಮತ್ತು ಸರ್ಕಾರಕ್ಕೂ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇದರ ಬಗ್ಗೆ ಇಲ್ಲಿ ಚರ್ಚೆ ತೆಗೆದುಕೊಳ್ಳುವುದರಲ್ಲಿ ಒಳ್ಳೆಯ ಅರ್ಥವಿದೆ. ಇಲ್ಲಿ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆಯಾದರೆ ಅನಂತರ ಸರ್ಕಾರದವರು ಸ್ಟ್ಯಾಟ್ಯೂಟರಿ ಬಾಡಿಗೆ ಟರ್ಮ್ಸ್ ಆಫ್ ರೆಫರೆನ್ಸ್‌ಗಳನ್ನು ಕೊಡುವಾಗ ಈ ಎಲ್ಲಾ ವಿಚಾರಗಳ ಬಗ್ಗೆ ತಿಳಿಸಲು ಅನುಕೂಲವಾಗುತ್ತದೆ. ಇದು ಇತ್ತೀಚೆಗೆ ನಡೆದಿರತಕ್ಕ ಘಟನೆ ಸಾರ್ವಜನಿಕವಾಗಿ ಪ್ರಾಮುಖ್ಯವಾಗಿರತಕ್ಕ ಘಟನೆ ನಾನು ವಿವರಗಳ ಬಗ್ಗೆ ಹೋಗುತ್ತಿಲ್ಲ. ಆದುದರಿಂದ ತಾವು ಇಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ ಈ ಸದನದ ಬಹುಪಾಲು ಸದಸ್ಯರು ಆದರಲ್ಲಿ ಭಾಗವಹಿಸಿ ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೂ ಮತ್ತು ಸಾರ್ವಜನಿಕರ ಗಮನಕ್ಕೂ ತರುವುದಕ್ಕೆ ಅನುಕೂಲವಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ನಮ್ಮ ಅನೇಕ ಜನ ಮಿತ್ರರು ಸಹ ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. ಆದುದರಿಂದ ನಾವು ಯಾವುದೇ ವಿವರಗಳನ್ನು ಪ್ರಸ್ತಾಪ ಮಾಡುವುದಕ್ಕಾಗಲೀ ಆಥವಾ ಮೋಷನ್ ಮೂವ್ ಮಾಡಿ ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗಲಿ ತಮ್ಮ ಅನುಮತಿ ಬೇಕಾಗುತ್ತದೆ. ಆದರೆ ಈ ವಿಚಾರಕ್ಕೆ ತಾವು ಒಪ್ಪಿಗೆ ಕೊಡುವ ಬಗ್ಗೆ ತಮ್ಮ ಮನಸ್ಸನ್ನು ಒಲಿಸತಕ್ಕದು ಯಾರು ನೋಟೀಸ್ ಕೊಟ್ಟಿದ್ದಾರೋ ಅವರಿಗೆ ಬಿಟ್ಟದ್ದು. ಈ ಬಗ್ಗೆ ನಾನು ಮತ್ತು ವಿರೋಧ ಪಕ್ಷದ ನಾಯಕರು ನೋಟೀಸ್ ಕಳುಹಿಸಿದ್ದೇವೆ. ಇಲ್ಲಿ ವಿಷಯದ ಪ್ರಸ್ತಾಪಕ್ಕೆ ಹೋದರೆ ಸ್ವಲ ಕಾಲ ಹಿಡಿಯಬಹುದು. ಇದಕ್ಕೆ ತಾವು ಯಾವ ರೀತಿ ಅಭಿಪ್ರಾಯ ಪಡುತ್ತೀರಿ ಎಂಬ ಗೊತ್ತಿಲ್ಲ. ಯಾರ್ಯಾರು ನೋಟೀಸ್ ಕೊಟ್ಟಿದ್ದಾರೆ ಅವರೆಲ್ಲ ಪ್ರಸ್ತಾಪ ಮಾಡಿದರೆ ಅದಕ್ಕೆ ಅನುಮತಿ ಕೊಡಬೇಕೇ ಬಿಡಬೇಕೇ ಎಂಬುದು ತಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದ ನಾನು ತಮ್ಮನ್ನು ಮನ ಒಲಿಸುವ ದೃಷ್ಟಿಯಿಂದ ಬಳ್ಳಾರಿ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಪ್ರಸ್ತಾಪಿಸಿದರೆ ಅದು ನಿಯಮಾವಳಿಗೆ ವಿರೋಧವಾಗುವುದಿಲ್ಲ ಮತ್ತು ಸಂಪ್ರದಾಯಗಳು ಏನಿವೆ ಅವುಗಳಿಗನುಗುಣವಾಗಿ ಇರುತ್ತದೆಂದು ಹೇಳುತ್ತೇನೆ. ಬಳ್ಳಾರಿಯಲ್ಲಿ ನಡೆದಿರತಕ್ಕ ಘಟನೆ ವಿಚಾರದಲ್ಲಿ...

ಅಧ್ಯಕ್ಷರು.—ಪೆರಿಟ್ಸ್‌ಗೆ ಹೋಗುವುದು ಬೇಡ.

ಶ್ರೀ ಹೆಚ್. ಗಂಗಾಧರಸ್ವಾ.—ಆ ಬಗ್ಗೆ ಈಗಾಗಲೇ ಕ್ರಿಯಾಲೋಪವನ್ನು ಎತ್ತಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ನಾನು ಹೇಳಿದ್ದೇನೆ. ಆದುದರಿಂದ ಸಂಪೂರ್ಣವಾಗಿ ಆವರ ಪೆರಿಟ್ಸ್‌ಗೆ ಹೋಗುವುದು ನನಗೆ ಇಷ್ಟವಿಲ್ಲ. ನಾಳೆ ದಿವಸ ಜುಡಿಷಿಯಲ್ ಇನ್‌ಕ್ವೈರಿಗೆ ತೊಂದರೆ ಆಗಬಾರದೆಂಬ ದೃಷ್ಟಿಯಿಂದ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೋದ ಮರು ದಿವಸ...

ಅಧ್ಯಕ್ಷರು —ಮುಂದಕ್ಕೆ ಹೋಗುವುದಕ್ಕೆ ಮೊದಲು ಇದೊಂದು ಮುಂಗಿಯಲಿ ತಾವು ಮತ್ತು ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಕಳುಹಿಸಿದ್ದೀರಿ. ಅದು ಚರ್ಚೆಯ ವ್ಯಾಪ್ತಿಗೆ ಬರುತ್ತದೆಯೇ ಇಲ್ಲವೇ ಎಂಬ ಬಗ್ಗೆ ತಾವು ಹೇಳಿದ್ದೀರಿ. ಅದರ ಬಗ್ಗೆ ನನ್ನ ಅಭಿಪ್ರಾಯ ಹೇಳಿದ ಮೇಲೆ ಮುಂದಿನ ವಿಚಾರಕ್ಕೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಒಂದು ಟಿಕ್ನಿಕಲ್ ಆಸ್ಪೆಕ್ಟ್. ಅದರ ಬಗ್ಗೆ ತಾವು ಆಗಲೇ ಹೇಳಿದ್ದೀರಿ ಮತ್ತು ನಾವು ಕೂಡ ತಿಳಿಸಿದ್ದೇವೆ. ಇನ್ನೊಂದು ತಾವು ಒಪ್ಪಿಗೆ ಕೊಡತಕ್ಕದ್ದು. ಟಿಕ್ನಿಕಲ್ ಆಸ್ಪೆಕ್ಟ್ ಬಗ್ಗೆ ಹೇಳುವುದಾದರೆ ತಪ್ಪನ್ನು ಆ ಕಡೆಯವರು ಮಾಡಿರಬಹುದು ಅಥವಾ ನಾವು ಮಾಡಿರಬಹುದು. ಆದ್ದರಿಂದ, ಈ ವಿಷಯ ಚರ್ಚೆಯಾದ ಮೇಲೆ ಯಾವ ರೀತಿ ಪ್ರಶ್ನೆ ಕಳುಹಿಸಬೇಕೆಂಬುದು ಗೊತ್ತಾಗುತ್ತದೆ ತಮ್ಮ ಅನುಮತಿಗೋಸ್ಕರ ನಾವೇನು ನಿರ್ಣಯವನ್ನು ಮೂವ್ ಮಾಡುತ್ತಿಲ್ಲ. ನಿರ್ಣಯದ ಬಗ್ಗೆ ಸದನದ ಮುಂದೆ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿ ಬೇಕಾಗುತ್ತದೆ. ನಿಯಮ ಆ ರೀತಿ ಹೇಳುತ್ತದೆ. ಇದಕ್ಕೆ ಅನುಮತಿ ಕೊಡುವುದು· ಬಿಡುವುದು ತಮಗೆ ಬಿಟ್ಟದ್ದು. ತಾವು ಹೇಳಿದ್ದಕ್ಕೆ ನಾವು ತಲೆ ಬಾಗುತ್ತೇವೆ, ತಾವು ಇದಕ್ಕೆ ಒಪ್ಪಿಗೆ ಕೊಟ್ಟರೆ ಸಾರ್ವಜನಿಕರ ಹಿತದೃಷ್ಟಿಯಿಂದ ಒಳ್ಳೆಯದೆಂದು ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತೇನೆ ಎಲ್ಲವನ್ನೂ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ತಾವು, ವಿಷಯ ಚರ್ಚೆಗೆ ಅನುಮತಿ ಕೊಡಬಹುದೇ ಅಥವಾ ಕೊಡಬಾರದೇ ಎನ್ನುವುದಕ್ಕೆ ಅನುಕೂಲವಾಗಬಹುದು. ಆ ದೃಷ್ಟಿಯಿಂದ ಬಳ್ಳಾರಿಯ ಘಟನೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಆ ಬಗ್ಗೆ ಕ್ರಿಯಾಲೋಪ ಇದೆ. ರೂಲ್ ೬೩ರ ಪ್ರಕಾರ ಅದನ್ನು ಎತ್ತುವುದಕ್ಕಾಗುವುದಿಲ್ಲ. ಅದು ಹೇಗಾಗುತ್ತದೆಂದು ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ,

ಶ್ರೀ ಜೆ. ಹೆಚ್. ಪಟೇಲ್.—ನಿಯಮ ೬೩ರ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಸರ್ಕಾರ ಈಗಾಗಲೇ ನ್ಯಾಯಾಂಗ ತನಿಖೆಯನ್ನು ಘೋಷಿಸಿದೆ. ವಾಸ್ತವಿಕವಾಗಿ ಹೈಕೋರ್ಟಿನಿಂದ ನ್ಯಾಯಾಧೀಶರೊಬ್ಬರು ಬಂದಿಲ್ಲ, ಆ ಕಾರಣಕ್ಕೊಸ್ಕರ ಕಾರ್ಯಕ್ರಮ ಶುರುವಾಗಿಲ್ಲ ಸಾಮಾನ್ಯವಾಗಿ, ಸಬ್‌ಜುಡೀಸ್ ಎನ್ನುವ ಪದವನ್ನೇನು ಉಪಯೋಗಿಸುತ್ತೇವೆ—ಆ ಪ್ರಕಾರ, ಯಾವುದಾದರೂ ಕೋರ್ಟಿನ ಮುಂದೆ ಅಥವಾ ಕೋರ್ಟಿಗೆ ಸನಾನವಾಗಿರತಕ್ಕದ್ದರ ಮುಂದೆ ವಿಚಾರ ಇದ್ದಾಗ ಆ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬಾರದು ಎನ್ನುವ ವಿಚಾರ ಮಾನ್ಯ ಬಂಗಾರಪ್ಪನವರಿಗೇನೂ ಗೊತ್ತಿಲ್ಲದೆ ಇಲ್ಲ, ಸಾಕಷ್ಟು ಕಾನೂನು ಪಾಂಡಿತ್ಯವನ್ನು ಪಡೆದಿರುವ ವೀರಪ್ಪ ಮೊಯಿಲಿಯವರಿಗೇನೂ ಗೊತ್ತಿಲ್ಲದೆ ಇಲ್ಲ.

ಶ್ರೀ ಎಸ್ ಬಂಗಾರಪ್ಪ.—ಸರ್ಕಾರದ ಅಜ್ಞೆ ಆದರೆ ಮಾತ್ರ.

ಶ್ರೀ ಜೆ. ಹೆಚ್. ಪಟೇಲ್.—ಅಜ್ಞೆ ಆಗಿದೆ. ಜುಡಿಷಿಯಲ್ ಎನ್‌ಕ್ವೈರಿಗೆ ಆಜ್ಞೆ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ —ನ್ಯಾಯಾಂಗ ವಿಚಾರಣೆಗೆ ಸರ್ಕಾರದ ಆಜ್ಞೆ ಆಗಿದ್ದರೆ ಯಾರು ನ್ಯಾಯಾಧೀಶರು ? ಟರ್ಮ್ಸ್ ಮತ್ತು ರೆಫರೆನ್ಸ್ ಏನು ? ಯಾವ ಜಿ.ಓ ಪ್ರಕಾರ ಆಜ್ಞೆ ಯಾಗಿದೆ ?

ಶ್ರೀ ಕೆ. ಹೆಚ್. ರಂಗನಾಥ್.—ಬರೀ ಆಜ್ಞೆಯಾಗುವುದು ಆಷ್ಟೇ ಅಲ್ಲ, ಆಜ್ಞೆಯಾಗಿ ನ್ಯಾಯಾಧೀಶರ ನೇಮಕವಾಗಿ ಆಪರ ಮುಂದಿದ್ದರೆ ಮಾತ್ರ ರೂಲ್ ೬೩ರ ಪ್ರಕಾರ ಚರ್ಚೆ ಮಾಡುವುದಕ್ಕೆ ಬರುತ್ತದೆಯೇ ವಿನಹ ಬರೀ ಆಜ್ಞೆ ಮಾಡಿದಾಕ್ಷಣ ಬರುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಆಜ್ಞೆ ಮಾಡಿದಾಕ್ಷಣ ಬರುವುದಿಲ್ಲವೆಂದು ನೀವು ತಾಂತ್ರಿಕ ಕಾರಣ ಹೇಳುತ್ತೀರಿ. ಆದರೆ ರೂಲ್ ೬೧ ಪ್ರಕಾರ ಆ ನಿಲುವು ಬದಲಾಗುತ್ತದೆ. ಆದುದರಿಂದ, ನಾವು ಇಂಥ ವಿಷಯಗಳನ್ನು ಚರ್ಚೆ ಮಾಡುವುದರಿಂದ ಯಾವುದೇ ನ್ಯಾಯಾಲಯಗಳಿಗೆ ಪ್ರಿಜುಡೀಸ್ ಆಗಬಾರದೆಂಬ ಕಾರಣಕ್ಕೋಸ್ಕರ ಈ ತತ್ವವನ್ನು ಇಟ್ಟುಕೊಂಡಿದ್ದೇವೆ "Practice and procedure by kaul and Shakdar ಪ್ರಕಾರ ಟಿಕ್ನಿಕಲ್ ಆಗಿ ಇದು ಸಬ್‌ಜುಡೀಸ್ ಆಗುವುದಿಲ್ಲ. ಆದರಲ್ಲಿ ಈ

ವಿಚಾರವನ್ನು ಜೆನ್ನಾಗಿ ಪ್ರಸ್ತಾಪ ಮಾಡಿದ್ದಾರೆ. ಅದು ಈ ರೀತಿ ಇದೆ· The matter is not subjudice until the legal proceedings have actually been started. ಆ ದೃಷ್ಟಿಯಿಂದ ನಿಮ್ಮ ವಾದ...

ಶ್ರೀ ಕೆ.ಚ್. ರಂಗನಾಥ.—ಆ ದೃಷ್ಟಿಯಿಂದ ರೂಲ್ ೬೩ ಬರುವುದಿಲ್ಲ ಮತ್ತು ತಪ್ಪು ಕ್ರಿಯಾ ಲೋಪ ಉಳಿಯುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಇನ್ನೂ ಸ್ವಲ್ಪ ಕೇಳಿ. "but the moment a complaint is filed or a petition launched involving jurisdiction of any of the Courts in India, the Court is seized of the matter and to that extent the jurisdiction of the House to discuss the matter is barred," ಇಂಗ್ಲೀಷಿನಲ್ಲಿ ಹೇಳಿದ್ದು ತಿಳಿಯದಿದ್ದರೆ ಕನ್ನಡದಲ್ಲಿ ಬಿಡಿಸಿ ಹೇಳಬೇಕಾಗುತ್ತದೆ.

ಕೆ.ಹೆಚ್. ರಂಗನಾಥ್,—ನಮಗೆ ಕನ್ನಡದಲ್ಲಿ ಬಿಡಿಸಿ ಹೇಳುವುದು ಬೇಕಾಗಿಲ್ಲ, ನಿಮಗೇ ಬೇಕಾದರೆ ಹೇಳಿಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್.—ಆದುದರಿಂದ, ಈಗಾಗಲೇ ಮಾನ್ಯ ಸದನದ ನಾಯಕರು ಹಾಗೂ ಕಾನೂನು ಸಚಿವರು ಹೇಳಿದ ಹಾಗೆ ತಾಂತ್ರಿಕ ಕಾರಣಗಳಿಂದ ರೂಲ್ ೬೩ರ ಪ್ರಕಾರ ಸಬ್‌ಜುಡೀಸ್ ಆಗುವುದಿಲ್ಲ ಎಂದು ಪ್ರಸ್ತಾಪ ಮಾಡಿದರೂ ತಪ್ಪಾಗುತ್ತದೆ ಏಕೆಂದರೆ, ನ್ಯಾಯಾಂಗ ತನಿಖೆ ಮಾಡುವು ದಾಗಿ ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಲಕ್ಷ್ಮೀಸಾಗರ್‌ರವರಿಗೆ ಏಕೆ ಈ ಕೇಸನ್ನು ಆರ್ಗ್ಯೂ ಮಾಡುವುದಕ್ಕೆ ಕೊಡಬಾರದಾಗಿತ್ತು ? Why are you arguing a bad case ?

ಶ್ರೀ ಜೆ. ಹೆಚ್. ಪಟೇಲ್.—ರೂಲ್ ೬೧ರ ಪ್ರಕಾರ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ, ಯಾವ ಆಧಾರದ ಮೇಲೆ ಸಬ್‌ಜುಡೀಸ್ ಎಂದು ಕರೆಯುತ್ತೇವೆ. ಅದೇ ತತ್ವದ ಆಧಾರದ ಮೇಲೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದ್ದರೂ ಮಾನ್ಯ ಅಧ್ಯಕ್ಷರು ಅದಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

೧–೩೦ ಪಿ.ಎಂ.

ಶ್ರೀ ಎಚ್. ಗಂಗಾಧರನ್.—ಪೆಂಡಿಂಗ್ ಎನ್‌ಕ್ವೈರಿ ಎನ್ನುವ ಅರ್ಥದ ಅರ್ಥವ್ಯಾಪ್ತಿ ಸರಿ ಯಲ್ಲ. According to jurisprudence when the law is set in motion, that is the first stage of starting inquiry of any litigation. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ, ಎಫ್.ಐ.ಆರ್. ಪೋಲೀಸ್ ಸ್ಟೇಷನ್ ತಲುಪಿದರೆ ಪೋಲೀಸ್ ಸ್ಟೇಷನ್‌ನವರು ಅದನ್ನು ಕೋರ್ಟಿಗೆ ಕಳುಹಿಸಿದರೆ, that is the beginning stage of the inquiry. Whether there is a Magistrate in existence or not, when once the F.I.R. is lodged in the Court, the law starts in this way. ಸರ್ಕಾರ ತನ್ನ ನಿಲುವನ್ನು ಘೋಷಣೆ ಮಾಡಿದೆ ಈ ವಿಷಯಗಳನ್ನು ಕುರಿತು ನ್ಯಾಯಾಂಗ ತನಿಖೆ ಆಗಬೇಕಾಗಿದೆ. ಈ ಬಗ್ಗೆ ನ್ಯಾಯ ಮೂರ್ತಿಗಳನ್ನು ನೇಮಿಸಬೇಕೆಂದು ಒಂದು ಪತ್ರವನ್ನು ಕಳುಹಿಸಿದ ನಂತರ ಮಾನ್ಯ ಮುಖ್ಯಮಂತ್ರಿಗಳೂ ಕೂಡಾ ಹೇಳಿದ್ದಾರೆ. He has set the law in motion under the jurisprudence. He has set the law in motion. Is he not setting the law in motion ? ಎಫ್.ಐ.ಆರ್.ನ್ನು ಕಳುಹಿಸಿದರೆ ಅದು ಪ್ರಾರಂಭವಾಗುವುದಿಲ್ಲವೇ ? Do you want the judge to be appointed just to inquire into this particular matter ? So, the letter written by the Chief Minister is on behalf of the Government. It is the decision of the Government. It is the Government which makes a reference to the Commission of inquiry. So, the Government has done that.

When once the Government has done that, the law is set in motion. But, only the formality remains. FIR is sent to the Court. Investigation may be pending. Inquiry may be pending. But, it does not mean inquiry has not started. But, once the Government has sent a letter stating a particular purpose for which the Commission is to be appointed that means the law has started ; inquiry has started and it is deemed to be pending under Rule 63. That should be taken into consideration.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂತಹ ಒಂದು ಗಂಭೀರವಾದ ವಿಷಯವನ್ನು ಚರ್ಚೆ ಮಾಡುವಾಗ ವಿರೋಧ ಪಕ್ಷದವರಾಗಲೀ, ಸರ್ಕಾರದವರಾಗಲೀ ಬಹಳ ಕಳಕಳಿಯಿಂದ, ಜವಾಬ್ದಾರಿ ತನದಿಂದ ನಡೆದುಕೊಳ್ಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಬಂಗಾರಪ್ಪ ನವರು ಹೇಳಿದ ಹಾಗೆ ತಾಂತ್ರಿಕವಾಗಿ ಈ ವಿಚಾರವನ್ನು ನೋಡಬಾರದು. ಮಾನ್ಯ ಮುಖ್ಯಮಂತ್ರಿ ಗಳು ತಮ್ಮ ನಿಲುವನ್ನು ಹೇಳಿದ್ದಾರೆ. ಅಷ್ಟು ತಾಂತ್ರಿಕವಾಗಿ ಮಾನ್ಯ ಬಂಗಾರಪ್ಪನವರು ಹಾಗೂ ವಿರೋಧ ಪಕ್ಷದ ನಾಯಕರು ನೋಡಬಾರದು. ನ್ಯಾಯಾಂಗ ವಿಚಾರಣೆಗೆ ಆಜ್ಞೆ ಮಾಡಲಾಗಿದೆ. ಇವತ್ತು ನ್ಯಾಯಾಧೀಶರ ನೇಮಕ ಆಗಿಲ್ಲ ಎನ್ನುವ ಮಾತ್ರಕ್ಕೆ ನಾವು ವಿಚಾರವನ್ನು ಪ್ರಸ್ತಾಪ ಮಾಡ ಬಹುದೇ ? ಈ ಸಭೆ ಕೂರುವುದಕ್ಕಿಂತ ಮೊದಲೇ, ಅಂದರೆ ನಿನ್ನೆಯೇ ನ್ಯಾಯಾಧೀಶರ ಹೆಸರು ಬಂದಿದ್ದರೆ ಇಲ್ಲಿ ಹೀಗೆ ಚರ್ಚೆ ಮಾಡುವುದಕ್ಕೆ ಆಗುತ್ತಿರಲಿಲ್ಲ. ಇದು ಒಂದು ತಾಂತ್ರಿಕ ವಿಚಾರ. ಇಂತಹ ಘಟನೆಗಳು ನಡೆದಾಗ ಹಿಂದೆ ಇದ್ದ ಸರ್ಕಾರ ನ್ಯಾಯಾಂಗ ವಿಚಾರಣೆ ಮಾಡುವ ಬಗ್ಗೆ ಹಿಂದೆ ಮುಂದೆ ನೋಡಿದ ಅನೇಕ ಸಂದರ್ಭಗಳನ್ನು ನಾವು ನೋಡಿದ್ದೇವೆ. ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ನ್ಯಾಯಾಂಗ ವಿಚಾರಣೆ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಅದಕ್ಕೂ ಅವರೂ ಸ್ವಾಗತಿಸಿದ್ದಾರೆ. ಘಟನೆ ನಡೆದ ಸ್ಥಳಕ್ಕೆ ಮಂತ್ರಿಗಳು ಹೋಗಿದ್ದಾರೆ. ಅಧಿಕಾರಿಗಳು ಹೋಗಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಸಾರ್ವಜನಿಕರಲ್ಲಿ ನ್ಯಾಯಾಂಗ ತನಿಖೆ ಆಗಬೇಕು ಎನ್ನುವ ವಿಚಾರ ಇತ್ತು.

ಶ್ರೀ ಎಂ. ರಾಮಪ್ಪ.—ಅಲ್ಲಿ ರಾಜಕೀಯ ಮಾಡಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯದ ಗಂಭೀರತೆಯನ್ನು ಕಳೆದುಕೊಳ್ಳುವುದು ಬೇಡ.

ಒಬ್ಬ ಮಾನ್ಯ ಸದಸ್ಯರು.—ಈ ವಿಷಯಕ್ಕೇ ಸದನದ ವೇಳೆಯನ್ನು ವ್ಯಯಂ ಮಾಡುವುದು ಬೇಡ. ಮಾನ್ಯ ಅಧ್ಯಕ್ಷರು ಈ ಬಗ್ಗೆ ತಮ್ಮ ಉತ್ತರವನ್ನು ಕೊಟ್ಟು ಬೇರೆ ವಿಷಯವನ್ನು ಏಕೆ ಪ್ರಸ್ತಾಪ ಮಾಡಬಾರದಂ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲಿ ಮಾನ್ಯ ಸದಸ್ಯರ ಹಕ್ಕುಭಾದ್ಯತೆಗಳ ಪ್ರಶ್ನೆ ಇದೆ. ಈ ಬಗ್ಗೆ ಚರ್ಚೆ ಆಗಬೇಕಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ —ಈ ವಿಚಾರವನ್ನು ತಾಂತ್ರಿಕವಾಗಿ ನೋಡದೇ ನ್ಯಾಯಾಂಗ ವಿಚಾರಣೆಗೆ ಒಪ್ಪಿರುವುದರಿಂದ, ಇದಕ್ಕೆ ಬಾಧಕವಾಗದ ರೀತಿಯಲ್ಲಿ ನಾವು ನಡೆದುಕೊಳ್ಳಬೇಕು. ನಿಯಮ ಪುಸ್ತಕದಲ್ಲಿ ನ್ಯಾಯಾಂಗ ವಿಚಾರಣೆಯಾದರೆ ಹೆಚ್ಚು ವಿವರವಾದ ಚರ್ಚೆ ಬೇಡವೆಂದು ಇದೆ. ಆದ್ದರಿಂದ ಇದನ್ನು ಗಮನಸೆಳೆಯುವ ಸೂಚನೆಯಾಗಿ ತೆಗೆದುಕೊಳ್ಳೋಣ. ಸರ್ಕಾರದಿಂದ ಉತ್ತರ ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೆಲವು ವಿಚಾರಗಳು ಪ್ರಸ್ತಾಪವಾಗಿವೆ. ಇದರಲ್ಲಿ 'ಸಬ್ಜುಡೀಸ್' ಬರುವುದಿಲ್ಲ. 'ರೇಪ್' ಚಾರ್ಜಸ್ ಬಗ್ಗೆ ಕೂಡಾ ಎಫ್.ಐ.ಆರ್. ಹೋಗದ ಹೊರತು ಚಾರ್ಜ್‌ಶೀಟ್ ಹಾಕುವುದಿಲ್ಲ. ಚಾರ್ಜ್‌ಶೀಟ್ ಹಾಕದೇ ಹೋದರೆ ಸಬ್ಜುಡೀಸ್ ಆಗುವುದಿಲ್ಲವೆಂದೂ ಸುಪ್ರೀಮ್ ಕೋರ್ಟ್‌ನಲ್ಲಿ, ಹೈಕೋರ್ಟ್‌ನಲ್ಲಿ, ವಿಧಾನ ಸಭೆಯಲ್ಲಿ, ಲೋಕಸಭೆಯಲ್ಲಿ ಕೊಟ್ಟ ತೀರ್ಪುಗಳು ಇವೆ. ಆದ್ದರಿಂದ ನಾನು ಈ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಚ್. ಗಂಗಾಧರನ್.—ಚಾರ್ಜ್‌ಶೀಟ್ ಹಾಕುವ ಅವಶ್ಯಕತೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡುತ್ತೇವೆ ಎಂದಾಗ ನಾವೂ ಕೂಡಾ ಸ್ವಾಗತ ಮಾಡಿದ್ದೇವೆ. ನ್ಯಾಯಾಂಗ ವಿಚಾರಣೆ ಬಗ್ಗೆ ಹೇಳಿಕೆ ಕೊಟ್ಟ ತಕ್ಷಣ ಸರ್ಕಾರ ತೃಪ್ತಿ ಪಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದೂ ಒಂದು ರೀತಿಯ ಆಶ್ವಾಸನೆಯಾಗಬಹುದು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೈಕೋರ್ಟಿಗೆ ಬರದ ಕೂಡಲೇ ನ್ಯಾಯಾಂಗ ವಿಚಾರಣೆಗೆ ಆಪ್ಷನ್ ಕೊಟ್ಟ ಹಾಗೆ ಆಗುವುದಿಲ್ಲ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಯವರು "Political forces behind Bellary violence" ಎಂದು ಹೇಳಿದ್ದಾರೆ. ರಿನೇ ತಾರೀಖಿನ ನ್ಯಾಯಾಂಗ ವಿಚಾರಣೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇತ್ತ ಆಶ್ವಾಸನೆಯನ್ನು ಇನ್ನೂ ಈಡೇರಿಸಲಿಲ್ಲವೆಂಬುದೇ ನಮ್ಮ ಪ್ರಮುಖವಾದ ಪ್ರಶ್ನೆ. ಇದನ್ನು ಇಲ್ಲಿಗೇ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಘಟನೆಯು ನಡೆದಿದೆ. ಗೃಹ ಮಂತ್ರಿಯವರಾಗಲೀ, ಮಾನ್ಯ ಮುಖ್ಯಮಂತ್ರಿಯವರಾಗಲೀ, ಸರ್ಕಾರವಾಗಲೀ ತನ್ನ ಜವಾಬ್ದಾರಿಯನ್ನು ಯಾರೋ ಒಬ್ಬ ಡಿ.ಜಿ.ಪಿ.ನ್ನು scopegoat ಮಾಡತಕ್ಕ ಪ್ರವೃತ್ತಿಯನ್ನು ತೋರಿಸಿ ನ್ಯಾಯಾಂಗ ವಿಚಾರಣೆ ಮಾಡತಕ್ಕದ್ದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಸಾರ್ವಜನಿಕರಲ್ಲಿ ಒಂದು ಸಂಶಯ ಬರುವ ರೀತಿಯಲ್ಲಿ ನಡೆದುಕೊಳ್ಳುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನದೊಂದು ಕ್ರಿಯಾಲೋಪ ಇದೆ. ಈ ವಿಚಾರದಲ್ಲಿ ತಾಂತ್ರಿಕವಾಗಿ ಅನೇಕ ಕ್ರಿಯಾಲೋಪಗಳನ್ನು ಎತ್ತಿರುವುದಕ್ಕೆ ಮಾನ್ಯ ಅಧ್ಯಕ್ಷರು ನಿರ್ಣಯ ಕೊಡಬೇಕಾಗುತ್ತದೆ ಹಿಂದೆ ಅನೇಕ ಸಲ ಕೊಲೆಗಳು ನಡೆದಾಗ, ಪೋಲೀಸರ ಮುಖಾಂತರ ಗೋಲೀಬಾರ್ ಮಾಡಿಸಿದಾಗ ನಾವು ವಿರೋಧಪಕ್ಷದವರು ನ್ಯಾಯಾಂಗ ವಿಚಾರಣೆ ಮಾಡಬೇಕು ಎಂದಾಗ ಆ ಸರ್ಕಾರ ಅದಕ್ಕೆ ಒಪ್ಪಲಿಲ್ಲ. ತಾವು ಅಂದರೆ ಶ್ರೀ ಮೊಯಿಲಿಯವರು ಅಧಿಕಾರದಲ್ಲಿದ್ದಾಗ ಅನೇಕ ಬಾರಿ ಗೋಲೀಬಾರ್ ಮಾಡಿಸಿದಿರಿ. ಆದರೆ ನ್ಯಾಯಾಂಗ ವಿಚಾರಣೆ ಮಾಡಿಸಲಿಲ್ಲ. ಈ ಸರ್ಕಾರದ ಬಗ್ಗೆ ಹೇಳುವಾಗ ತಾವು ಆಲೋಚನೆ ಮಾಡಬೇಕು. ತಾವೂ ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ಹಿಂದೆ ಎಷ್ಟೋ ಬಾರಿ ಗೋಲೀಬಾರ್ ಆದಾಗ ನಾವು ಧರಣಿ ಕುಳಿತು ನ್ಯಾಯಾಂಗ ವಿಚಾರಣೆ ಮಾಡಬೇಕೆಂದಾಗ ಆದಕ್ಕೆ ಒಪ್ಪದೆ ನಮ್ಮನ್ನು ಎತ್ತಿ ಹೊರಗೆ ಹಾಕಿಸಿದ್ದೀರಿ, ವಾಕೌಟ್ ಮಾಡಿಸಿದ್ದೀರಿ. ಆದರೆ ಈ ಸರ್ಕಾರ ಏನೂ ಮುಚ್ಚಿಡುವುದಕ್ಕೆ ಹೋಗುವುದಿಲ್ಲ. ತಾವು ಅರ್ಥ ಮಾಡಿಕೊಳ್ಳಬೇಕು. ತಾವೂ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಇಪತ್ತು . ...

ಶ್ರೀ ಎಂ. ವೀರಪ್ಪ ಮೊಯಿಲಿ.—ಪಾಯಿಂಟ್ ಆಫ್ ಆರ್ಡರ್ ಏನು ಹೇಳಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನೇ ಹೇಳುತ್ತಿದ್ದೇನೆ. ಅಲ್ಲಿ ಘಟನೆ ಆದ ಮೇಲೆ ಸರ್ಕಾರ ಆಜ್ಞೆ ಮಾಡಿದೆ. ನ್ಯಾಯಾಂಗ ವಿಚಾರಣೆ ಬಗ್ಗೆ ಆಜ್ಞೆಯಾಗಿದೆ. ಆಜ್ಞೆ ಮಾಡಿದ ಮೇಲೆ ನ್ಯಾಯಾಂಗ ವಿಚಾರಣೆಗೆ ನ್ಯಾಯಾಧೀಶರನ್ನು ಕೊಡಿ ಎಂದು ಹೈಕೋರ್ಟಿಗೆ ಬರೆಯಬೇಕಾಗುತ್ತದೆ. ಆ ಪ್ರಕಾರ ಅವರಿಗೆ ತಿಳಿಸಿದ್ದೇವೆ. ಅಲ್ಲಿಂದ ಉತ್ತರ ಬರಬೇಕಾಗುತ್ತದೆ. ಅದಲ್ಲದೆ ಎರಡನೇ ದಿವಸವೇ ಮುಖ್ಯಮಂತ್ರಿಗಳು ಹೋಗಿ ನ್ಯಾಯಾಂಗ ವಿಚಾರಣೆ ಬಗ್ಗೆ ಜಾಹೀರುಪಡಿಸಿ ಆ ಬಗ್ಗೆ ಆಜ್ಞೆ ಆಗಿದೆ. ಇದರಲ್ಲಿ ಮುಚ್ಚಿಡತಕ್ಕದ್ದು ಸಾಚಿಕೆಪಡತಕ್ಕದ್ದು ಏನೂ ಇಲ್ಲ. ತಾವು ರಾಜಕೀಯ ಮಾಡುವುದಕ್ಕೆ ಹೋಗಬೇಡಿ. ಹಿಂದೆ ಮಾಡಿರತಕ್ಕ ಪಾಪವನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಮಾಡುವಂಥ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸರ್ಕಾರಕ್ಕೆ ತಾವು ಅಭಿನಂದಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ತರೀಕೆರೆ ಚುನಾವಣೆಯಲ್ಲಿ ಜನ ಕೊಟ್ಟಿದ್ದಾರೆ

ಶ್ರೀ ಎಸ್. ಆರ್. ಬೊಮ್ಮಾಯಿ.—ನ್ಯಾಯಾಂಗ ವಿಚಾರಣೆ ಹೇಗೆ ಮಾಡಿಸಬೇಕು ಎಂಬುದನ್ನು ಹೇಳಿ, ಮತ್ತು ಟರ್ಮ್ಸ್ ಆಫ್ ರೆಫರೆನ್ಸ್ ಯಾವುದು ಎಂಬುದನ್ನು ಹೇಳಿ. ಅದನ್ನು ಬಿಟ್ಟು ಸುಮ್ಮನೆ ಸರ್ಕಾರದ ಮೇಲೆ ಟೀಕೆ ಮಾಡಿದರೆ ಏನು ಪ್ರಯೋಜನವಿಲ್ಲ.

ಶ್ರೀ ಜಿ. ಡಿ. ಸೋಮಪ್ಪ.—ತರೀಕೆರೆಯಲ್ಲಿ ನಿಮ್ಮ ಸರ್ಕಾರದ ಪುಣ್ಯವನ್ನು ಜನ ಎತ್ತಿ ಹಿಡಿದಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳುತ್ತೇನೆ ಹೊಸ ನಿಯಮಗಳನ್ನು ನಾವು ಸ್ವೀಕಾರ ಮಾಡಿದ್ದೇವೆ. ಈಗಿನ ಮಾನ್ಯ ಸದಸ್ಯರೂ ಹಿಂದೆ ಸಭಾಧ್ಯಕ್ಷರೂ ಆಗಿದ್ದ ಮಾನ್ಯ ಕೆ. ಎಚ್. ರಂಗನಾಥ್ ಅವರು ಇಂಥ ವಿಚಾರ ಬಂದಾಗ ಅಧ್ಯಕ್ಷ ಸ್ಥಾನದಿಂದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಿಲುವಳಿ ಸೂಚನೆ ಬಂದಾಗ ಲೋಕಸಭೆಯಲ್ಲಿ ಯಾವ ರೀತಿ ಆಗಿದೆ ಎಂಬುದು ಹೇಳಿದ್ದಾರೆ. ಅಧ್ಯಕ್ಷರು ತಮ್ಮ ಕೊಠಡಿಯಲ್ಲಿ ಈ ಬಗ್ಗೆ ವಿಚಾರ ಮಾಡಿ ನಿಲುವಳಿ ಸೂಚನೆಗೆ ಅನುಮತಿ ನಾ ಮಂಜೂರು ಮಾಡಿದ ವಿಚಾರ ಇದೆ. ವಿಚಾರ ಗಂಭೀರವಾಗಿದ್ದಾಗ ಸದಸ್ಯರು ಸ್ವಲ್ಪದರಲ್ಲೇ ಅಧ್ಯಕ್ಷರ ಮನವೊಲಿಸತಕ್ಕ ಪ್ರಯತ್ನ ಮಾಡಿದಾಗ ಅನುಮತಿ ನಿರಾಕರಿಸಿದ ಉದಾಹರಣೆಗಳೂ ಇವೆ. ಇದಲ್ಲದೆ ನಾವು ಈಗ ಹೊಸ ನಿಯಮಗಳನ್ನು ತೆಗೆದುಕೊಂಡಿದ್ದೇವೆ. ಹೊಸ ಪರಂಪರೆಯನ್ನು ಹಾಕಂತಿದ್ದೇವೆ. ನಾವು ಲೋಕಸಭೆ ನಿಯಮಾವಳಿಗಳನ್ನು ಸ್ವೀಕಾರ ಮಾಡಿರುವುದರಿಂದ ಅದಕ್ಕನುಗುಣವಾಗಿ ಇವತ್ತು ತಾವು ನಿರ್ಣಯ ಕೊಡಬೇಕು. ಈಗಾಗಲೇ ನಿಯಮಾವಳಿ ೬೩ ಮತ್ತು ೬೧ರ ಬಗ್ಗೆ ಪ್ರಸ್ತಾಪವಾಗಿದೆ ಅದೂ ಅಲ್ಲದೆ ಈ ವಿಷಯ ಚರ್ಚೆ ಮಾಡುವುದಕ್ಕೆ ಗವರ್ನಮೆಂಟ್ ಸೆಳೆಯುವ ಸೂಚನೆ ಇರುವುದರಿಂದ ಇದನ್ನು ಗವರ್ನಮೆಂಟಲ್ಲಿಟ್ಟುಕೊಂಡು ಈ ವಿಚಾರದಲ್ಲಿ ನಿರ್ಣಯ ಕೆ ಇಟ್ಟು ಚರ್ಚೆಯನ್ನು ಮುಕ್ತಾಯಗೊಳಿಸಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ.—ಈಗ.....

ಅಧ್ಯಕ್ಷರು.—ತಮಗೆ ಇನ್ನೂ ಎಷ್ಟು ಸಮಯ ಬೇಕು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಮಯದ ಪ್ರಶ್ನೆ ಇದಲ್ಲ.

ಶ್ರೀ ಧನಂಜಯ ಕುಮಾರ್.—ನಿಲುವಳಿ ಸೂಚನೆ ಇದೆ. ಎರಡೂ ಪಕ್ಷದವರೂ ಸೇರಿ ನಿಲುವಳಿ ಸೂಚನೆ ಚರ್ಚೆಯಾಗಬಾರದು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ದಯಮಾಡಿ ರೂಲಿಂಗ್ ಕೊಡಿ.

ಅಧ್ಯಕ್ಷರು.—ನಿಲುವಳಿ ಸೂಚನೆ ಇಲ್ಲ. ಗವರ್ನಮೆಂಟಿನ ಸೆಳೆಯುವ ಸೂಚನೆ ಇದೆ. ನಿಲುವಳಿ ಸೂಚನೆ ಬೇಕು ಎಂದು ಕೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರು ಸಬ್-ಜ್ಯುಡೀಸ್ ವಿಚಾರ ಹೇಳಿದರು, ಅವರು ಅನುಭವ ಹೊಂದಿದವರು. ಕೌಲ್ ಅಂಡ್ ಶಕ್ದರ್‌ರವರ ಪುಸ್ತಕದಲ್ಲಿ ಈ ರೀತಿ ಹೇಳಿದ್ದಾರೆ. ಪುಟ ೬೧೧ರಲ್ಲಿ ಇದಿದೆ.

ಅಧ್ಯಕ್ಷರು.—ಅದನ್ನು ಜೆ. ಎಚ್. ಪಟೇಲ್‌ರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಇದನ್ನು ಓದಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳತಕ್ಕ.....

ಶ್ರೀ ಎಂ. ವೀರಪ್ಪ ಮೊಯಿಲಿ.—ಸಮಯ ಹೋಗುತ್ತಿದೆ. ಮಾನ್ಯ ಅಧ್ಯಕ್ಷರು ನನಗೆ ರಕ್ಷಣೆ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಓದತಕ್ಕದನ್ನು ಅವರು ಓದಿ ಹೇಳುತ್ತಿದ್ದಾರೆ, ಅವರು ಓದಿದ್ದನ್ನು ನೀವು ಓದಿ ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾಲ್ ಮತ್ತು ಶಕ್ದರ್ ಅವರ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ.

> "It is a well established rule that discussion on a matter which is subjudice is out of order and it has been held that the matter is not subjudice until legal proceedings have actually started."
> ಇದಕ್ಕಿಂತ ಇನೆ ೀನು ಬೇಕು?

SRI A. LAKSHMISAGAR.—When do you say a legal proceedings has started? What is the parameter within which you bring a matter and say that the legal proceeding has started? Who is to say? According to me a mere complaint to the Police station under the jurisdiction of the Court is the beginning of a litigation and therefore the matter becomes subjudice.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಯಾವುದೇ ರೆಫರೆನ್ಸ್ ಹಾಕದೆ, ನ್ಯಾಯಾಧೀಶರ ನೇಮಕ ಆಗಿದೆ, ನ್ಯಾಯಾಂಗ ವಿಚಾರಣೆಗೆ ಸರ್ಕಾರ ಆದೇಶ ಕೊಡದೇ ನ್ಯಾಯಾಂಗ ವಿಚಾರಣೆ ಪ್ರಾರಂಭವಾಗಿದೆ ಎಂದು ಹೇಳಿದರೆ ಅವನ್ನು ಹೇಗೆ ನಾವು ನಂಬುವುದು? ನ್ಯಾಯಾಧೀಶರ ನೇಮಕ ಆಗಬೇಕು, ಅವರು ಪ್ರೊಸೀಡಿಂಗ್ಸ್ ಪ್ರಾರಂಭ ಮಾಡಬೇಕು. ಶ್ರೀಮಾನ್ ರಂಗನಾಥ್ ಅವರು ಹೇಳಿದ ಪ್ರಕಾರ... .

ಅಧ್ಯಕ್ಷರು —ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನ್ಯಾಯಾಂಗ ವಿಚಾರಣೆಗೆ ಅಪ್ಪಣೆ ಮಾಡಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಯವರು ಬಾಯಿಮಾತಿನಲ್ಲಿ ಆಶ್ವಾಸನೆ ಕೊಟ್ಟರೆ ಅದನ್ನು ಅಪ್ಪಣೆ ಎಂದು ಸ್ವೀಕಾರ ಮಾಡುವುದಕ್ಕೆ ನಾವು ತಯಾರಿಲ್ಲ.

ಅಧ್ಯಕ್ಷರು.—ಸದನದಲ್ಲಿ ಹೇಳುವುದನ್ನು ಸ್ವೀಕಾರ ಮಾಡಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಇನ್ನೂ ಆಗಿಲ್ಲ ಎಂದು ಅವರೇ ಹೇಳಿದ್ದಾರೆ. ನಂತರ.....

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ದಯವಿಟ್ಟು ಒಂದು ನಿಮಿಷ ಯೀಲ್ಡ್ ಆದರೆ.....

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಪೂರ್ತಿ ಮಾಡುತ್ತೇನೆ.

ಶ್ರೀ ಬಿ ಎನ್. ಯಡಿಯೂರಪ್ಪ.—ಇದೇನು ಸ್ವಾಮಿ.**

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎನ್. ಯಡಿಯೂರಪ್ಪ.—ಇಲ್ಲಿ ಬರೀ ಬುದ್ಧಿವಂತಿಕೆ ಪ್ರದರ್ಶನ ಆಗುತ್ತಿದೆ. ಈಗ ಸಾಕಷ್ಟು ಚರ್ಚೆಯಾಗಿದೆ. ತಾವು ರೂಲಿಂಗ್ ಕೊಡಿ. ಇಲ್ಲದೇ ಇದ್ದರೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು.—ಹಾಗೆ ಹೇಳುವುದಕ್ಕಾಗುವುದಿಲ್ಲ. ನೀವು ಕುಳಿತುಕೊಳ್ಳಿ.

ಶ್ರೀ ಜೆ ಡಿ. ಸೋಮಪ್ಪ.—ತಾವು ಹಾಗೆ ಹೇಳುವುದಕ್ಕಾಗುವುದಿಲ್ಲ, ಸರ್ಕಾರ ಅವರ ಮೇಲೆಯೇ ನಿಂತಿರುವುದು.

ಶ್ರೀ ಕೆ. ಎಚ್. ರಂಗನಾಥ್.—ಸದಸ್ಯರು ಹೊಸಬರಿದ್ದಾರೆ. ಅವರು ತಿಳಿದುಕೊಳ್ಳದೆ ಸದನದ ಬಗ್ಗೆ ಮತ್ತು ಅಧ್ಯಕ್ಷರ ಬಗ್ಗೆ ಹೀಗೆ ಮಾತನಾಡುವುದು ಸರಿಯಲ್ಲ ಮಾನ್ಯ ಅಧ್ಯಕ್ಷರು ಮಾನ್ಯ ಸದಸ್ಯರಿಗೆ ಹೇಳಬೇಕು.

ಶ್ರೀ ಬಿ. ಎನ್. ಯಡಿಯೂರಪ್ಪ.—ಸಾಕಷ್ಟು ಚರ್ಚೆಯಾಗಿರುವುದರಿಂದ ರೂಲಿಂಗ್ ಕೊಡಿ ಎಂದು ಹೇಳುತ್ತಿದ್ದೇನೆ. ಸುಮ್ಮನೆ ಚರ್ಚೆಯಲ್ಲೇ ಸಮಯ ಏತಕ್ಕೆ ವ್ಯರ್ಥ ಮಾಡುತ್ತಿದ್ದಾರೆ?

ಒಬ್ಬ ಮಾನ್ಯ ಸದಸ್ಯರು.—ಒಳ್ಳಾರಿ ಘಟನೆ ಆಕಸ್ಮಿಕವಾಗಿ ಆಗಿರುವುದು. ಆದರೆ ಅಸ್ಸಾಂನಲ್ಲಿ ಕೊಲೆಯಾಗುತ್ತಿದೆ. ಅದರ ಬಗ್ಗೆ ಏನೂ ಹೇಳದೇ ಇದರ ಬಗ್ಗೆ ಏತಕ್ಕೆ ಇಷ್ಟೊಂದು ಹೇಳುತ್ತಿದ್ದಾರೆ?

ಒಬ್ಬ ಮಾನ್ಯ ಸದಸ್ಯರು.—ಒಳ್ಳಾರಿ ವಿಷಯ ಮೊದಲು ಆಗಲಿ, ಅಸ್ಸಾಂ ವಿಷಯ ಏತಕ್ಕೆ ಬೇಕು? ಬಳ್ಳಾರಿಯಲ್ಲಿ ಅನ್ಯಾಯವಾಗಿರುವುದು ನಮಗೆ; ನಿಮಗಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪ ನವರು ಈ ಸದನಕ್ಕೆ ಹೊಸಬರು. ಆದರೆ ತಾವು ಇಲ್ಲಿ ವಿಚಾರ ಮಾಡಬೇಕು. ಇಲ್ಲಿ ಅನೇಕ ಬಾರಿ ನಿಲುವಳಿ ಸೂಚನೆ ಬಂದಾಗ ದಿನಗಟ್ಟಲೆ ಆ ವಿಚಾರವನ್ನು ಚರ್ಚೆ ಮಾಡಿದ್ದೇವೆ. ನಾವು ಆಡಳಿತಪಕ್ಷದಲ್ಲಿದ್ದೇವೆ, ನಮಗೆ ಮೆಜಾರಿಟಿ ಇದೆ ಎಂದು ವಿಚಾರವನ್ನು ಮೊಟಕು ಗೊಳಿಸುವುದಕ್ಕೆ ಬರುವುದಿಲ್ಲ, ಮತ್ತು ಹಾಗೆ

ಪೊಟಕಗೊಳಿಸಲೂಬಾರದು. ಆದ್ದರಿಂದ ಮಾನ್ಯ ಸದಸ್ಯರು ಏನು ಒಂದು ಶಬ್ದ ಹೇಳಿದ್ದಾರೋ ಆ ಶಬ್ದವನ್ನು ದಯಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನಾನು ನೋಡುತ್ತೇನೆ.

ಶ್ರೀ ಬಿ.ಎನ್. ಯಡಿಯೂರಪ್ಪ.—ಹಿಂದೆ ಇದೇ ವಿಚಾರದ ಬಗ್ಗೆ ಚರ್ಚೆಯಾಗಿ ರೂಲಿಂಗ್ ಇರುವುದರಿಂದ ಆದನ್ನು ನೋಡಿ ಒಂದು ರೂಲಿಂಗ್ ಕೊಡಿ ಎಂದು ಹೇಳುತ್ತಿದ್ದೇನೆ. ಈ ತರಹದ ವಿಚಾರಗಳು ಹಿಂದೆ ಚರ್ಚೆಯಾಗಿವೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಹಿಂದೆ ಅನೇಕ ಸಂದರ್ಭಗಳಲ್ಲಿ ಒಂದು ನಿಲುವಳಿ ಸೂಚನೆ ಬಂದು ಆದರ ಮೇಲೆ ಚರ್ಚೆ ಆದಾಗ ಪ್ರಸ್ತಾವನೆಗೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ, ಯಾವ ಸಂದರ್ಭದಲ್ಲಿಯೂ ಕೂಡ ಅವಕಾಶವನ್ನು ಮೊಟಕುಗೊಳಿಸಿದ್ದನ್ನು ನಾನು ನೋಡಿಲ್ಲ. ನಿಲುವಳಿ ಸೂಚನೆ ತಂದಾಗ, ಗವರ್ನರ ಸೆಳೆಯಂಥ ಸೂಚನೆಗೆ ಪ್ರಾಮುಖ್ಯತೆ ಕೊಟ್ಟು ನಿಲುವಳಿ ಸೂಚನೆಗೆ ಅಡ್ಡಿ ತಂದಿದುನ್ನು ನಾನು ಈ ಸದನದ ಇತಿಹಾಸದಲ್ಲಿ ನೋಡಿಲ್ಲ. ನ್ಯಾಯಾಂಗ ತನಿಖೆಗೆ ಸರ್ಕಾರ ಅಪ್ಪಣೆ ಕೊಟ್ಟಿದ್ದರೆ, ಇಲ್ಲ ಚರ್ಚೆ ಮಾಡಲಿಕ್ಕೆ ಒಪ್ಪುತ್ತಿರಲ್ಲ. ನ್ಯಾಯಾಂಗ ವಿಚಾರಣೆ ಆಗದೇ ಇರತಕ್ಕ ಸಂದರ್ಭದಲ್ಲಿ, ಮಾನ್ಯ ಬಂಗಾರಪ್ಪನವರು ಹೇಳಿದಹಾಗೆ ಟರ್ಮ್ಸ್ ಆಫ್ ರೆಫರೆನ್ಸ್ ಮಾಡುವಂಥ ಸಂದರ್ಭದಲ್ಲಿ ನಮ್ಮ ಸೂಚನೆಯನ್ನು ತೆಗೆದುಕೊಂಡಿದ್ದರೆ. ಹೆಚ್ಚಿನ ನ್ಯಾಯ ಅಲ್ಲಿನ ಜನರಿಗೆ ದೊರೆಯುವುದಕ್ಕೆ ಸಾಧ್ಯವಿತ್ತು ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದು ಬರೀ ಬಳ್ಳಾರಿ ಪೋಲೀಸ್ ಅಧಿಕಾರಿಗಳಿಗೆ, ಅಥವಾ ಪೋಲೀಸ್ ಸ್ಟೇಷನ್‌ಗೆ, ಅಥವಾ ಒಬ್ಬ ಸಬ್ ಇನ್‌ಪೆಕ್ಟರಿಗೆ, ಯಾ-ಕಾನ್ಸ್‌ಟೇಬಲ್‌ಗೆ ಸೀಮಿತ ವಾದಂಥ ವಿಚಾರವಲ್ಲ. ಮಹಿಳೆಯ ಮೇಲೆ ಅತ್ಯಾಚಾರ ನಡೆದದ್ದು ೧೪ನೇ ತಾರೀಖು ೧೪ ರಿಂದ ೧೬ನೇ ತಾರೀಖಿನವರೆಗೆ ಈ ಸರ್ಕಾರ ಯಾವುದೇ ರೀತಿಯಾದಂಥ ಕಾರ್ಯಕ್ರಮವನ್ನು ಯಾರ ಮೇಲೂ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ಮೆರಿಟ್‌ಗೆ ಹೋಗಬೇಡಿ,

ಶ್ರೀ ಎಂ. ವೀರಪ್ಪ ಮೊಯ್ಲಿ.—ಮೂರು ದಿವಸಗಳ ಕಾಲ ಸರ್ಕಾರ ಏನು ಮಾಡಿದೆ. ಸರ್ಕಾರ ನಿರ್ವೀರ್ಯವಾಗಿ ಕೂತುಕೊಂಡಿತ್ತೆ? ೧೪-೧೬ನೇ ತಾರೀಖಿನೊಳಗೆ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದಂಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದರೆ, ೧೭-೧೮ರಂದು ಆದಂಥ ದೊಡ್ಡ ದುರಂತ ನಡೆಯುತ್ತಿರಲಿಲ್ಲ. ಇಲ್ಲಿಂದ ಬಿಜಾಪುರಕ್ಕೆ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ, ಬಿಜಾಪುರದಿಂದ ಹೈದರಾಬಾದಿಗೆ ಹೋಗಿ ಅಲ್ಲಿ ರಾಜಕೀಯ ಕೈವಾಡ ಇದೆಯೆಂದು ಹೇಳಿಕೊಂಡು, ಇದರಬಗ್ಗೆ ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಹೇಳಿದರೆ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ.

ಶ್ರೀ ಬಿ.ಬಿ. ಚಿವ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಯವರು ಈ ಸಂದರ್ಭದಲ್ಲಿ ಇರಬೇಕಾಗಿತ್ತು

ಅಧ್ಯಕ್ಷರು.—ತಮಗೆ ಈಗಲಾದರೂ ನೆನಪಾದುದಕ್ಕೆ ಬಹಳ ಸಂತೋಷ ಪಡುತ್ತೇನೆ. ತಾವು ಎಷ್ಟುಹೊತ್ತಿಗೆ ಮುಗಿಸುತ್ತೀರಿ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ವ್ಯಾಪಕವಾದ ಪ್ರಶ್ನೆ ಇರುವುದರಿಂದ ತಮ್ಮಗಮನಕ್ಕೆ ತರುತ್ತಿದ್ದೇನೆ ೧೪ ರಿಂದ ೧೬ರವರೆಗೆ ಸುಮ್ಮನಿದ್ದು ಜನತೆ ಉದ್ರೇಕಗೊಂಡಾಗ ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದು ಹೇಳುವುದು ಇದು ಜಿಲ್ಲಾ ಪೋಲೀಸ್ ಅಧಿಕಾರಿಯ ಜವಾಬ್ದಾರಿಯೆ? ಗೃಹ ಖಾತೆಯನ್ನು ಹೊತ್ತುಕೊಂಡಂಥ ಸರ್ಕಾರದ ಜವಾಬ್ದಾರಿಯೆ? ಇದನ್ನು ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಹಾಕದೇ ಇದ್ದರೆ ಇದಕ್ಕೆ ಯಾರು ಜವಾಬ್ದಾರರು? ನ್ಯಾಯಾಂಗ ವಿಚಾರಣೆಗೆ ಮೊದಲು ಉನ್ನತ ಪೋಲೀಸ್ ಅಧಿಕಾರಿಗಳನ್ನು ವರ್ಗ ಮಾಡಿ, ನ್ಯಾಯಾಂಗ ವಿಚಾರಣೆ ಮಾಡುವಂತಾದ್ದು ನಮಗೆ ಬೇಕಿಲ್ಲ ಇದು ಬಹಳ ಗಂಭೀರವಾದಂಥ ವಿಚಾರವಾದುದರಿಂದ ತಾವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

SRI A. LAKSHMISAGAR —Why he should be presumptuous that there is no terms of reference. The Government has not shown its intention as indicated about the nature of terms of reference. This is very plain. We have requested the hon'ble High Court to spare the services of a Judge and they have got to indicate the name. But he presumes without any basis.....

ಶ್ರೀ ಎಂ. ವೀರಪ್ಪ ಮೊಯ್ಲಿ —ಇದರಲ್ಲಿ ಯಾವರೀತಿಯಾದಂಥ ಪ್ರಿಸಮ್ಪ್ಷನ್ ಇಲ್ಲ. ಇಲ್ಲಿ ಮೂಲಭೂತವಾಗಿರತಕ್ಕ ಪ್ರಶ್ನೆ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಯಾವರೀತಿ ನ್ಯಾಯಾಧಿಶರುಗಳನ್ನು ನೇಮಕ ಮಾಡಬೇಕೆಂದು ಹೇಳೀದ್ದೀರಿ.

SRI A. LAKSMISAGAR.—There cannot be any judicial inquiry without the terms of reference, That is why I said, you are presumptious.

SRI M. VEERAPPA MOILY.—The terms of reference will have to be.....

ಶ್ರೀ ಎನ್. ಆರ್. ಲಕ್ಷ್ಮಯ್ಯ.—ಕರ್ನಾಟಕ ರಾಜ್ಯದಲ್ಲಿ ಕಳ್ಳಬಟ್ಟಿಯಂಥ ದುರಂಥಗಳು ಬೇಕಾದಷ್ಟು ನಡೆದು ಹೋಗಿವೆ. ಅವುಗಳ ಬಗ್ಗೆ ಏನು ಕ್ರಮತೆಗೆದುಕೊಂಡಿದ್ದಿರಿ?

ಶ್ರೀ ಎಂ. ವೀರಪ್ಪ ಮೊಯ್ಲಿ —ಅಧ್ಯಕ್ಷರೇ, ನಮಗೆ ಮಾತನಾಡುವುದಕ್ಕೆ ತೊಂದರೆ ಮಾಡಿದರೆ ಹೇಗೆ? ತಾವು ನಮ್ಮ ರಕ್ಷಣೆಗೆ ಬರಬೇಕು. ಈ ಟರ್ಮ್ಸ್ ಆಫ್ ರೆಫರನ್ಸ್ ನಿಂದ ನಮಗೆ ತೃಪ್ತಿ ಇರುವುದಿಲ್ಲ ನ್ಯಾಯಾಧೀಶರನ್ನು ನೇಮಕಾ ಮಾಡುವುದಕ್ಕೆ ಮುಂಚೆ ಟರ್ಮ್ಸ್ ಆಫ್ ರೆಫರೆನ್ಸ್ ಬರಬೇಕು ನ್ಯಾಯಾಂಗ ತನಿಖೆ ಮಾಡುತ್ತೇನೆಂದು ಹೇಳಿಕೊಂಡು ಬಂದರೆ ಇದರಿಂದ ಜನತೆಯ ಮನಸ್ಸಿನಲ್ಲಿ ಏನು ಒಂದು ಸಂಶಯ ಉದ್ಭವವಾಗಿದೆ ಅದನ್ನು ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ. ಪೋಲೀಸ್ ಅಧಿಕಾರಿಗಳನ್ನು ಮನ ಬಂದಂತೆ ವರ್ಗಮಾಡಿ, ಡೀಮಾರಲೈಸ್ ಮಾಡುವುದಕ್ಕೆ ಹೊರಟು ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಹೇಳುವುದು ಸರಿಯಲ್ಲ ನಡೆದಂಥ ಘಟನೆ ಗಂಭೀರವಾಗಿರುವುದರಿಂದ ಇದರಬಗ್ಗೆ ಚರ್ಚೆ ಮಾಡಬೇಕಾಗಿದೆ. ಬಳ್ಳಾರಿ ಘಟನೆ ಬಗ್ಗೆ ಇಡೀ ಕರ್ನಾಟಕ ಜನತೆಯ ಗಮನ ಸೆಳೆದಿದೆ. ಅದಕ್ಕಿಂತಲೂ ಹೆಚ್ಚಿಗೆ ಮಾನ್ಯ ಪ್ರಮುಖಮಂತ್ರಿಯವರ ತಾವು ಹೋದ ಕಡೆಯ ಲೆಲ್ಲಾ ಯಾವ ಘಟನೆ ನಡೆದರೂ ಅದರ ಹಿಂದೆ ರಾಜಕೀಯ ಕೈವಾಡ ಇದೆಯೆಂದು ಹೇಳಿ ಕೊಂಡು ಬರುವುದು ಪೊಣೆಗೇಡಿತನ ಎಂಬುದು ಸಾರ್ವಜನಿಕರ ಗಮನಕ್ಕೆ ಬರಬೇಕಾಗಿದೆ. ತಾವು ನಿಲುವಳಿ ಸೂಚನೆಗೆ ಒಪ್ಪಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ತಾವು ನಿಲುವಳಿ ಸೂಚನೆ ಬಗ್ಗೆ ಹೇಳಿದ್ದೀರಿ, ಇದರ ಗಂಭೀರತೆಯನ್ನು ಮನಗಂಡಿದ್ದೀರಿ. ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ. ಯಾವರೀತಿ ಮಾಡಬೇಕೆಂಬುದನ್ನು ಆಲೋಚನೆ ಮಾಡೋಣ. ಈ ಸಭೆ ಹೆಚ್ಚು ಹೊತ್ತು ಕೂತುಕೊಳ್ಳುವುದಕ್ಕೆ ಸಿದ್ದವಿದ್ದರೆ, ನಾನು ಕೂತುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸಂಪೂರ್ಣವಾದ ಅಧಿಕಾರವನ್ನು ತಮಗೆ ಕೊಟ್ಟಿದ್ದೇವೆ. ನಾನು ಹೆಚ್ಚು ಕಾಲಾವಧಿಯನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆ ಇಲ್ಲ. ಏಕೆಂದರೆ, ನ್ಯಾಯಾಂಗ ತನಿಖೆಯಿಂದ ಸಂಪೂರ್ಣವಾದ ವಿಷಯಗಳನ್ನು ವಿಚಾರಣೆ ಮಾಡಬೇಕಾಗುತ್ತದೆ ಎನ್ನುವ ವಿಚಾರ ನನಗೆ ಗೊತ್ತಿದೆ. ಈಗ ವಿಷಯವನ್ನು ಆಳವಾಗಿ ಅಭ್ಯಾಸ ಮಾಡುವುದಕ್ಕೆ ಒಂದು ಕಾರಣ ಇದೆ. ಈ ವಿಷಯದಲ್ಲಿ ಎರಡು ವಿಚಾರಗಳನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

೨-೦೦ ಪಿ. ಎಂ.

ಮಾನ್ಯ ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು ಏನು ಹೇಳಿದರು ಅದನ್ನು ಒಪ್ಪಿಕೊಳ್ಳೋಣ. ಈಗ ನಮ್ಮ ಮುಂದಿರುವ ಪ್ರಶ್ನೆ ಎನ್‌ಕ್ವೈರಿ ಪ್ರಶ್ನೆ ಇದೆ. ನಮ್ಮ ಆಜೆಂಡಾದಲ್ಲಿ ಗಮನ ಸೆಳೆಯುವ ಸೂಚನೆ ಇದೆ. ಅದರಲ್ಲಿ ಮಾನ್ಯ ಸದಸ್ಯರಾದ ಎಂ.ಎಸ್. ಕೃಷ್ಣನ್, ಹಾಗೂ ಇತರೆ ಸದಸ್ಯರ ಹೆಸರುಗಳು ಇವೆ. ಅದಕ್ಕೆ ಉತ್ತರ ಇನ್ನೂ ಬಂದಿಲ್ಲ. ಉತ್ತರ ಬಂದಿದ್ದರೆ ಸ್ವಲ್ಪ ಕಣ್ಣಾಡಿಸುತ್ತಿದ್ದೆ. ಈಗ ನ್ಯಾಯಾಂಗ ವಿಚಾರಣೆಗೆ ಆಜ್ಞೆ ಮಾಡಿರುವುದರಿಂದ ಸಬ್ ಜ್ಯುಡೀಸ್ ಎನ್ನುವುದು ಇರುತ್ತದೆ. ನಿಯಮಾವಳಿ ೬೩ ಏನು ಹೇಳುತ್ತದೆ ಎಂದರೆ ಒಂದು ವೇಳೆ ಸ್ಪಾಚ್ಯುಟರಿ ಬಾಡಿ, ಅಥವಾ ಜ್ಯುಡಿಷಿಯರಿ ಮುಂದೆ ಇದ್ದರೂ ಸಹ ಮಾನ್ಯ ಬೊಮ್ಮಾಯಿಯವರ ಅಭಿಪ್ರಾಯವನ್ನು ಒಪ್ಪಿದರೂ ಕೂಡ ತಮಗೆ ಈ ಪ್ರಾವಿಸೋ ೬೩ರ ಪ್ರಕಾರ ಅಧಿಕಾರ ಇದೆ. ಈ ವಿಷಯ ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ನಾವು ಎಕ್ಸೆಟ್ರಾ ಕೇರ್ ತೆಗೆದುಕೊಳ್ಳಬೇಕಾಗುತ್ತದೆ. ಅತಿ ಹೆಚ್ಚಿನ ವಿವರಗಳಿಗೆ ಹೋಗದಂತೆ ನಾಳೆ ಜುಡಿಷಿಯಲ್ ಎನ್‌ಕ್ವೈರಿಗೆ ತೊಂದರೆ ಬರದ ಹಾಗೆ ನೋಡಿಕೊಳ್ಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಹೆಚ್ಚಿನ ವಿವರಗಳಿಗೆ ಹೋಗಿಲ್ಲ ಇದು ಬಹಳ ಮುಂಖ್ಯವಾಗಿರತಕ್ಕ ವಿಷಯ. ಆದ್ದರಿಂದ ಹೇಳ ಬೇಕಾಗಿದೆ. ಆಷಳಿತದಲ್ಲಿ ಯಾರೇ ಇರಬಹುದು. ಘಟನೆ ನಡೆದಿರತಕ್ಕ ಎರಡು ಮೂರು ದಿನಗಳು ಬಹಳ ಮುಂಖ್ಯವಾದಂಥ ದಿನಗಳು. ಆ ದಿನಗಳನ್ನು ನೀವು ನೋಡಿದರೆ ಗೊತ್ತಾಗುತ್ತದೆ. ಮಾನ್ಯ ಗೃಹ ಮಂತ್ರಿಗಳು ಬಳ್ಳಾರಿಯಲ್ಲಿಯೇ ಇದ್ದು ನೋಡುತ್ತಿದ್ದರು ಎಂದು ಇದೆ. ಆ ಕ್ಷೇತ್ರದ ಶಾಸಕ ರಾದಂಥ ಮಾನ್ಯ ರಾಮಪ್ಪನವರು ಅಲ್ಲಿಯೇ ಇದ್ದರು. ನಿಜ ಹೇಳಬೇಕೆಂದರೆ ಮಾನ್ಯ ರಾಮಪ್ಪ ನವರಿಗೆ ಮತ್ತು ಅಲ್ಲಿನ ಸಾರ್ವಜನಿಕರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. ಏಕೆಂದರೆ ಇವರೆಲ್ಲರೂ ಅಂಗಡಿ ಬಾಗಿಲುಗಳನ್ನು ತೆರೆಸುತ್ತಾ, ಪರಿಸ್ಥಿತಿ ಚೆನ್ನಾಗಿದೆ ಎನ್ನುವ ಭಾವನೆ ಕೊಡಲಿಕ್ಕೆ ಪ್ರಯತ್ನ ಮಾಡು ತ್ತಿದ್ದರು. ಆದ್ದರಿಂದ, ಆ ಕ್ಷೇತ್ರದ ಸಾರ್ವಜನಿಕರಿಗೂ, ಮತ್ತು ಶಾಸಕರಿಗೂ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈಗಾಗಲೇ ನಿಲುವಳಿ ಸೂಚನೆ ಬಗ್ಗೆ ಹೇಳಿದ್ದೀರಿ, ಯಾವು ದಾದರೂ ರೂಪದಲ್ಲಿ ಚರ್ಚೆಗೆ ಹೇಳಿ, ಆದರ ಬಗ್ಗೆ ಸುಮ್ಮನೆ ಕಾಲ ವ್ಯಯ ಮಾಡುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಮುಂದೆ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಬರುತ್ತದೆ. ಈ ಒಂದು ವಿಷಯ ಪ್ರಮುಖವಾಗಿ ಇಲ್ಲ ಎಂದು ಅಲ್ಲ. ಇಲ್ಲದೇ ಇದ್ದರೆ ನೀವು ಏತಕ್ಕೆ ಜುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡುತ್ತಿದ್ದೀರಿ. ಯಾವ ರೀತಿ ಚರ್ಚೆ ಮಾಡಬೇಕು ಅದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇದರ ಚರ್ಚೆ ಆಗತ್ಯ ಇದೆ ಏಕೆಂದರೆ ಈ ತರಹದ ಘಟನೆ ಮುಂದೆ ಯಾವುದೇ ಕ್ಷೇತ್ರದಲ್ಲೂ ನಡೆಯಬಾರದು, ಅದು ಇಲ್ಲಿರತಕ್ಕ ಪ್ರಶ್ನೆ. ಆದ್ದರಿಂದ, ನಾನು ಒಂದೆರಡು ವಿಷಯ ಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ೧೪ನೇ ತಾರೀಖಿನಿಂದ ೧೬ನೇ ತಾರೀಖಿನವರೆಗೆ ಗಲಾಟೆ ನಡೆದು ೧೭ನೇ ತಾರೀಖು ಗೋಲಿಬಾರ್ ನಡೆದಿದೆ ಎಂದು ಗೊತ್ತು. ಅಂದು ಹೆಚ್ಚು ಜನ ಸತ್ತಿದ್ದಾರೆ. ಈ ಮಧ್ಯದ ಅವಧಿ ಏನಿದೆ ಆ ಅವಧಿಯಲ್ಲಿ ಸರ್ಕಾರ ಎಚ್ಚರಿಕೆಯಿಂದ ಮುಂಜಾಗ್ರತೆ ಕ್ರಮ ತೆಗೆದುಕೊಂಡಿದ್ದರೆ ಈ ಘಟನೆ ನಡೆದು ಜುಡಿಷಿಯಲ್ ಎನ್‌ಕ್ವೈರಿ ಮಾಡುವಂತಾದ್ದು ಬರುತ್ತಾ ಇರಲಿಲ್ಲ. ಅದನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಗಮನಕ್ಕೆ ತರುವುದಕ್ಕೆ ಯಾವುದಾದರೂ ರೂಪದಲ್ಲಿ ಅವಕಾಶ ಮಾಡೋಣ. ಈಗ ನಿಲುವಳಿ ಸೂಚನೆಯ ಬಗ್ಗೆ ಮಾನ್ಯ ಸದಸ್ಯರು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಕಳೆದ ಅವಧಿಯಲ್ಲಿ ಸರ್ಕಾರ ಗಮನ ಕೊಟ್ಟಿದ್ದರೆ, ಗೋಲೀಬಾರ್ ಆಗಲಿಕ್ಕೆ, ಜನರು ಸಾಯಲಿಕ್ಕೆ ಅವಕಾಶ ಇರಲಿಲ್ಲ. ಇದನ್ನು ಮಾನ್ಯ ಬೊಮ್ಮಾಯಿಯವರು ಸಹ ಒಪ್ಪ ಬಹುದು. ಆ ಒಂದು ಅವಧಿಯಲ್ಲಿ ಪೋಲೀಸ್ ಇಲಾಖೆ ಯಾವ ರೀತಿ ನಡದುಕೊಂಡಿದೆ ಅದು ಬಹಳ ಮುಂಖ್ಯವಾದಂಥ ಪ್ರಶ್ನೆ. ಅದನ್ನು ಎಲ್ಲರೂ ಗಮನದಲ್ಲಿಟ್ಟು ನೋಡಬೇಕು. ಇದು ಒಂದು ವಿಚಾರ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಾವು ಪ್ರತಿಯೊಂದಕ್ಕೂ ನಿಲುವಳಿ ಸೂಚನೆಗೆ ಕೇಳುವು ದಿಲ್ಲ. ಇನ್ನೊಂದು ವಿಚಾರ ತಿಳಿಸಬೇಕೆಂದರೆ, ಕೌಲ್ ಬಜಾರ್ ಪೋಲೀಸ್ ಠಾಣೆಯಲ್ಲಿ ಹೆಣ್ಣು ಮಗಳ

ಮಾನಭಂಗದ ವಿಚಾರ. ಇವೊತ್ತು ಆ ಹೆಣ್ಣು ಮಗಳು ಪತ್ರಿಕೆಯವರ ಎದುರಿನಲ್ಲಿ ಕಣ್ಣೀರು ಹಾಕಿ ಕೊಂಡು ಹೇಳಿರತಕ್ಕ ವಿಚಾರ ಇದೆ. ಅದಕ್ಕೋಸ್ಕರ ಈ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ. ಈಗ ಆಕೆಯ ಮೇಲೆ ಪೋಲೀಸರ ಒತ್ತಾಯ ಜಾಸ್ತಿಯಾಗಿದೆ. ಮಾನಭಂಗ ಆಗಿಲ್ಲ ಎಂದು ಹೇಳು, ನೀನು ಹಾಗೆ ಹೇಳು, ಹೀಗೆ ಹೇಳಿ ಎನ್ನುವ ಒತ್ತಡ ಪೋಲೀಸ್ ಇಲಾಖೆಯವರಿಂದ ಜಾಸ್ತಿಯಾಗಿದೆ,

ಅಧ್ಯಕ್ಷರು.—ಮಾನ್ಯ ಸದಸ್ಯರು ಮತ್ತೆ ವಿಷಯಕ್ಕೆ ಹೋಗುತ್ತಿದ್ದೀರಿ. ಇಲ್ಲಿ ಪ್ರಮುಖ ವಾದಂಥ ವಿಚಾರ ಇದನ್ನು ನಿಲುವಳಿ ಸೂಚನೆಗೆ ತೆಗೆದುಕೊಳ್ಳಬೇಕೆ ಅಥವಾ ಬೇಡವೇ ಎಂಬುದು ಇಲ್ಲಿರ ತಕ್ಕಂಥ ವಿಚಾರ.

ಶ್ರೀ ಎಸ್, ಬಂಗಾರಪ್ಪ.—ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಬರದೇ ಇರತಕ್ಕ ವಿಚಾರ ನಮ್ಮ ಹತ್ತಿರ ಇದೆ.

ಅಧ್ಯಕ್ಷರು.—ಮುಂದೆ ಚರ್ಚೆಗೆ ಸ್ವಲ್ಪ ವಿಷಯ ಉಳಿಸಿಕೊಂಡಿರಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಾವು ಯಾವ ರೀತಿ ಚರ್ಚೆಗೆ ಅನುಮತಿ ಕೊಡುತ್ತೀರಾ ? ತಿಳಿಸಬೇಕು. ಇದನ್ನು ಏತಕ್ಕೆ ಕೇಳುತ್ತಿದ್ದೇನೆಂದರೆ, ಅಲ್ಲಿ ಆಕೆಗೆ ಪೋಲೀಸರು ತೊಂದರೆ ಕೊಡುತ್ತಿದ್ದಾರೆ. ಇದು ಬಹಳ ಮುಖ್ಯವಾದಂಥ ವಿಚಾರ. ಸರ್ಕಾರ ಇದರ ಬಗ್ಗೆ ಇವೊತ್ತೇ ಉತ್ತರ ಕೊಡಬೇಕು. ಚರ್ಚೆ ಆಗಿಬಿಟ್ಟು ಮತ್ತೊಂದು ಮಾನಭಂಗ ಆದರೆ ಏನು ಮಾಡುವುದು ಆದ್ದರಿಂದ, ಸರ್ಕಾರ ಇವೊತ್ತೇ ಉತ್ತರ ಕೊಡಬೇಕು. ನನ್ನ ಮೇಲೆ ಒತ್ತಾಯ ಹಾಕುತ್ತಿದ್ದಾರೆ ಎನ್ನುವ ಹೇಳಿಕೆ ಕೊಟ್ಟಿರುವುದನ್ನು ಮಾನ್ಯ ಸಾಗರ್ ಅವರು ನೋಡಿರಬೇಕು. ಈ ತರಹ ಮಾಡುವುದು ಒಳ್ಳೆಯದಲ್ಲ ಸರ್ಕಾರಕ್ಕೆ ಇದು ಮರ್ಯಾದೆ ತರುವುದಿಲ್ಲ. ಈ ರೀತಿಯ ಬೆದರಿಕೆಯನ್ನು ಆ ಹೆಣ್ಣು ಮಗಳಿಗೆ ಹಾಕಿದರೆ ನಾಳೆ ವಾಸ್ತವಾಂಶವನ್ನು ನ್ಯಾಯಾಂಗ ತನಿಖೆ ಮಾಡತಕ್ಕವರ ಮುಂದೆ ಹೇಳಲಿಕ್ಕೆ ಹೇಗೆ ಸಾಧ್ಯವಾಗುತ್ತದೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ಈ ವಿಚಾರವನ್ನು ತಕ್ಷಣ ಪೋಲೀಸ್ ಇಲಾಖೆ ಯವರಿಗೆ ತಿಳಿಸಿ, ಆಕೆಗೆ ತೊಂದರೆಯಾಗುತ್ತಿರುವುದನ್ನು ನಿಲ್ಲಿಸಬೇಕು. ಇಲ್ಲದೇ ಹೋದರೆ ಜುಡಿಷಿಯಲ್ ಎನ್‌ಕ್ವಯಿರಿ ಮಾಡಿ ಜನರಿಗೆ ಕಣ್ಣೊರೆಸುವುದು ಆಗುತ್ತದೆ ಸತ್ಯ ಹೇಳುವುದಕ್ಕೆ ಅವಕಾಶ ಇಲ್ಲದಂತೆ ಆಗುತ್ತದೆ. ಆದ್ದರಿಂದ ಆ ಹೆಣ್ಣುಮಗಳ ಸುದ್ದಿಗೆ ಪೋಲೀಸರು ಇನ್ನು ಮುಂದಾದರೂ ಹೋಗದಂತೆ ನಿರ್ದೇಶನ ಕೊಡಬೇಕು. ಆಕೆ ಸತ್ಯವಾಗಿ ಇರತಕ್ಕ ವಿಷಯವನ್ನು ಹೇಳಲಿ. ನಾಳೆ ನ್ಯಾಯಾಧೀಶರಿಂದ ವಿಚಾರಣೆಯಾದಾಗ ತಪ್ಪಾಗಿದೆ ಅಥವಾ ತಪ್ಪಾಗಿಲ್ಲ ಎಂದು ಹೇಳುವುದು ಅವರಿಗೆ ಬಿಟ್ಟಿದ್ದು. ಈ ವಿಚಾರದಲ್ಲಿ ಉತ್ತರವನ್ನು ಸರ್ಕಾರದಿಂದ ನಾನು ಈಗಲೇ ನಿರೀಕ್ಷೆ ಮಾಡುತ್ತೇನೆ.

ಅಧ್ಯಕ್ಷರು.—ಚರ್ಚೆಗೆ ಬಂದ ಮೇಲೆ ನೋಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಅಜೆಂಡಾದಲ್ಲಿ ಗಮನ ಸೆಳೆಯುವ ಸೂಚನೆ ಇದೆ. ಈಗ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡದೇ ಹೋದರೂ ಏನೇನು ಮಾತನಾಡಬೇಕೋ ಎಲ್ಲಾ ಮಾತನಾಡಿದರು. ಯಾವ ರೀತಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ಎನ್ನುವುದನ್ನು ಮಾನ್ಯ ಅಧ್ಯಕ್ಷರು ತಿಳಿಸಬೇಕು.

ಅಧ್ಯಕ್ಷರು.—ನಿಲುವಳಿ ಸೂಚನೆ ಬಗ್ಗೆ ಸಾಕಷ್ಟು ವಿಚಾರಗಳನ್ನು ಸುಧೀರ್ಘವಾಗಿ ಚರ್ಚೆ ಮಾಡಿದ್ದೀರಿ. ಕಾನೂನು ಮತ್ತು ವ್ಯವಸ್ಥೆ ಆಡಳಿತ ಅದರ ಜೊತೆಯಲ್ಲಿಯೇ ಅಲ್ಲಲ್ಲಿ ನಡೆಯು ಬಹುದಾದಂಥ ಗೋಲೀಬಾರ್, ಲಾಠಿಚಾರ್ಜ್ ನಿಲುವಳಿ ಸೂಚನೆ ವ್ಯಾಪ್ತಿಗೆ ಬರುವುದಿಲ್ಲ. ಇಂತಹ ವಿಷಯಗಳು ಅನೇಕ ಸಾರಿ ಇದೇ ಸಭೆಯಲ್ಲಿ ತೀರ್ಮಾನ ಮಾಡಿರತಕ್ಕ ನಿದರ್ಶನಗಳು ಇವೆ. ಇದರ ಜೊತೆಗೆ ವಿಷಯ ಗಂಭೀರವಾಗಿರುವುದರಿಂದ ಬೇರೆ ರೂಪದಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಸಹ ಅವಕಾಶ ಇದೆ. ಅದೂ ಅಲ್ಲದೆ ಇದೇ ದಿವಸ ಗಮನ ಸೆಳೆಯುವ ಸೂಚನೆ ಮೂಲಕ ಈ ವಿಷಯ ಸಭೆಯ ಮುಂದೆ ಚರ್ಚೆಗೆ ಬರುವುದರಿಂದ ಇದಕ್ಕೆ ಸಂಬಂಧಪಟ್ಟಂತಹ ನಮ್ಮ ಹಿಂದಿನ ಸಭೆಗಳಲ್ಲಿ ಆಗಿರತಕ್ಕ ಹಲವು ತೀರ್ಮಾನಗಳ ಪೈಕಿ ಒಂದನ್ನು ಮಾತ್ರ ತಪ್ಪಿ ಗಮನಕ್ಕೆ ತರುತ್ತೇನೆ.

"Lathi charge or Police firing or any other thing undertaking in the maintenance of law and order cannot form the subject matter of adjournment motion."

ಇದನ್ನು ಗಮನದಲ್ಲಿಟ್ಟುಕೊಂಡು ಈ ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ. ಇದರ ಜೊತೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದಂಥ ಎರಡು ನಿಲುವಳಿ ಸೂಚನೆಗಳನ್ನೂ ಕೂಡ ಈ ಸಂದರ್ಭದಲ್ಲಿ ತಿರಸ್ಕರಿಸುತ್ತಾ ಈ ಸೂಚನೆಗಳನ್ನು ಕಳುಹಿಸಿಕೊಟ್ಟಿರತಕ್ಕಂಥ ಮಾನ್ಯ ಸದಸ್ಯರಿಗೆ ನಾನು ಹೇಳುವುದೇನೆಂದರೆ, ಇವುಗಳನ್ನು ಗಮನಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಿದ್ದೇನೆ. ಈಗ ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಮಾತನಾಡುವುದಕ್ಕೆ ಅನುಮತಿ ನೀಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ನೀತಿಯನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ,

(ಗೊಂದಲ)

ಅಧ್ಯಕ್ಷರು.—ಈ ನಿಲುವಳಿ ಸೂಚನೆಯ ವಿಚಾರ ತೀರ್ಮಾನವಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಗಮನ ಸೆಳೆಯುವ ಸೂಚನೆಗೆ ಅವಕಾಶವನ್ನು ಕೊಡುವುದಾದರೆ ನಾವು ಇದನ್ನು ಪ್ರತಿಭಟನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ತಮ್ಮ ಪ್ರತಿಭಟನೆ ನಮ್ಮ ಸರ್ಕಾರದ ಜೊತೆಗೆ ಇರಲಿ. ಆದರೆ ನಾನು, ನನ್ನ ಒಂದು ತೀರ್ಮಾನವನ್ನು ಕೊಟ್ಟಿದ್ದೇನೆ. ಅಲ್ಲದೆ ಈಗಾಗಲೇ ಮಾನ್ಯ ಕೃಷ್ಣನ್‌ರವರನ್ನು ಮಾತನಾಡಲು ಕರೆಸಿದ್ದೇನೆ.

SRI M. VEERAPPA MOILY.—I can agree with you. ಆದರೆ ನಿಮ್ಮ ನೀತಿಯನ್ನು ನೋಡಿ we have to protest against it.

ಶ್ರೀ ಎಸ್. ಬಂಗಾರಪ್ಪ.—ನಿಲುವಳಿ ಸೂಚನೆಯನ್ನು ಗಮನಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಲಾಯಿತು, ಬಿಡುವುದು ತಮಗೆ ಬಿಟ್ಟಿದ್ದು. ತಾವು ಹೇಳುವಾಗ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡದೆ ಸುಮ್ಮನೇ ಕೂತುಕೊಂಡೆ.....

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್ ಇದುವರೆಗೂ ಈ ವಿಷಯ...

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ತಾವು ಏನು ಹೇಳುವುದಕ್ಕೆ ಹೊರಟಿದ್ದೀರಿ ಎಂಬುದು ನನಗೆ ಗೊತ್ತು. ಮಾನ್ಯ ಅಧ್ಯಕ್ಷರು ತಮ್ಮ ರೂಲಿಂಗನ್ನು ಕೊಟ್ಟಮೇಲೆ ಮಾತನಾಡಬಾರದು, ಎನ್ನುವ ಮಾತನ್ನು ತಾವು ಹೇಳುತ್ತೀರೆಂದು ನನಗೆ ಗೊತ್ತಿದೆ.

ಶ್ರೀ ಜೆ. ಹೆಚ್. ಪಟೇಲ್.—ತಾವು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೀರಿ ಎಂಬುದೂ ನನಗೆ ಗೊತ್ತು. ಮಾನ್ಯ ಅಧ್ಯಕ್ಷರ ತೀರ್ಪು ಬಂದ ಮೇಲೆ ಮತ್ತೆ ಅದನ್ನು ಪ್ರಸ್ತಾಪ ಮಾಡುವುದು ಬೇಡ,

ಅಧ್ಯಕ್ಷರು.—ಸ್ವಾಮಿ, ನಿಮ್ಮದು ಅವರಿಗೆ ಗೊತ್ತು, ಅವರದು ನಿಮಗೆ ಗೊತ್ತು. ಆದರೆ ಈ ವಿಚಾರದಲ್ಲಿ ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಮ್ಮ ತೀರ್ಪಿನ ಬಗ್ಗೆ ವ್ಯಾಖ್ಯಾನ ಮಾಡುವುದು ಈಗ ಬೇಡ. ತಾವು ಈ ಕಡೆ ಕುಳಿತಿದ್ದಾಗ್ಗೆ ಯಾವರೀತಿ ನಡೆದುಕೊಳ್ಳುತ್ತಿದ್ದೀರಿ ಎಂಬುದನ್ನು ನೆನಪು ಮಾಡಿಕೊಳ್ಳಿ. ತಾವು ಒಂದು ತೀರ್ಪನ್ನು ಕೊಟ್ಟಮೇಲೆ ಮತ್ತೆ ಅದನ್ನು ರಿವೈಸ್ ಮಾಡುವುದಕ್ಕೂ ತಮಗೆ ಅವಕಾಶ ಮತ್ತು ಅಧಿಕಾರ ಇದೆ.

ಅಧ್ಯಕ್ಷರು.—ನಿಲುವಳಿ ಸೂಚನೆಯನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಬೇಕೆಂದು ನಾನು ತೀರ್ಪು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಒಂದು ಪದವನ್ನು ಪ್ರಯೋಗ ಮಾಡಿದ್ದರಿಂದ ನಾನು ಸುಮ್ಮನೆ ಕೂತುಕೊಂಡೆ. ಇಲ್ಲದಿದ್ದರೆ ನಾನು ಸುಮ್ಮನೆ ಕುಳಿತುಕೊಳ್ಳುತ್ತಿರಲಿಲ್ಲ. There can

never be any discussion or debate under the rules–Call Attention Notice.

MR. SPEAKER.—I cannot go back.

SRI S. BANGARAPPA.—You can. You have got ample powers. ಚರ್ಚೆ ಎನ್ನುವ ಪದವನ್ನು ನಾವು ಪ್ರಯೋಗ ಮಾಡಿದ್ದರಿಂದ ನಾನು ಸುಮ್ಮನೆ ಕೂತುಕೊಂಡೆ. ಆದರೆ ಇಲ್ಲಿ ಗಮನ ಸೆಳೆಯುವ ಸೂಚನೆಯಂ ಕೆಳಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಯಾರು ಸೂಚನೆಯನ್ನು ಕಳುಹಿಸಿರುತ್ತಾರೆ ಅವರು ಪಾತ್ರ ಮಾತನಾಡುವುದಕ್ಕೆ ಅವಕಾಶ ಇದೆ. ಆದರೆ ಇಷ್ಟರಲ್ಲಿ ಎಲ್ಲ ವಿಷಯವನ್ನೂ ನಿರೂಪಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತಮ್ಮ ಮಾತನ್ನು ತಾವು ಉಳಿಸಿಕೊಳ್ಳಬೇಕು. ಇದನ್ನು ಎರಡೂವರೆ ಗಂಟೆಗಳ ಕಾಲದ ಚರ್ಚೆಯನ್ನಾಗಿ ತೆಗೆದುಕೊಳ್ಳುವುದಕ್ಕೂ ಅವಕಾಶ ಇದೆ. ನಿಮ್ಮ ಅಧಿಕಾರ ವ್ಯಾಪ್ತಿಯ ಬಗ್ಗೆ ಯಾವುದೇ ಅನುಮಾನವೂ ಬೇಡ, ತಾವು ತಮ್ಮ ಮಾತಿನ ಪ್ರಕಾರ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಒಳ್ಳೆಯದು. ತಮ್ಮ ತೀರ್ಪನ್ನು ರಿವೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ (ಮಾನ್ಯ ಮುಖ್ಯ ಮಂತ್ರಿಗಳು),—ಮಾನ್ಯ ಅಧ್ಯಕ್ಷರೆ, ಹಿಂದಿನಿಂದ ನಡೆದುಕೊಂಡು ಬಂದಿರತಕ್ಕ ನಿಯಮಾವಳಿಗಳು ಮಾನ್ಯ ಸದಸ್ಯರಾದ ಬಂಗಾರಪ್ಪನವರಿಗಾಗಲಿ, ಅಥವಾ ವಿರೋಧಪಕ್ಷದಲ್ಲಿ ಕುಳಿತಿರತಕ್ಕ ಮಾನ್ಯ ಸದಸ್ಯರಿಗಾಗಲೀ ಹೊಸದೇನೂ ಅಲ್ಲ. ಇವತ್ತಿನ ದಿನ ರಾಜ್ಯದಲ್ಲಿ ಯಾವುದೇ ಘಟನೆಗಳು ನಡೆದಾಗಲೂ ಆದರ ಬಗ್ಗೆ ನ್ಯಾಯಾಂಗ ತನಿಖೆಯಾಗ ಬೇಕೆಂದು ಹೇಳಿದಾಗ ಅದನ್ನು ಆಡಳಿತ ಪಕ್ಷದವರು ನಿರಾಕರಿಸಿದಾದ ಸತ್ಯಾಗ್ರಹಗಳು, ಚರ್ಚೆಗಳೂ ಆಗಿರುವುದುಂಟು. ಆದರೆ, ನಾವು ಅಧಿಕಾರಕ್ಕೆ ಬಂದಮೇಲೆ ನಡೆದ ಘಟನೆಗಳ ಬಗ್ಗೆ ಕೂಡಲೇ ನ್ಯಾಯಾಂಗ ತನಿಖೆ ಮಾಡಬೇಕೆಂದು ಆಜ್ಞೆ ಮಾಡಿದ್ದನ್ನು ಆ ಪಕ್ಷದ ಎಂ.ಪಿ.ಗಳು ಶ್ಲಾಘಿಸಿ ಪತ್ರವನ್ನು ಬರೆದಿದ್ದಾರೆ. ಈಗ ನಮ್ಮ ಸರ್ಕಾರವೇ ನ್ಯಾಯಾಂಗ ತನಿಖೆಗೆ ಆಜ್ಞೆಯನ್ನು ಮಾಡಿರುವಾಗ ಇಲ್ಲಿ ಚರ್ಚೆ ಏತಕ್ಕೆ ಆಗಬೇಕು? ಸತ್ಯಾಗ್ರಹ ಚರ್ಚೆಗಳು ಆದಮೇಲೆ ನಾವು ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಬೇಕೆ ? ಇಲ್ಲಿ ಎರಡೂ ಆಗಬೇಕಾದಂಥ ಪ್ರಮೇಯವು ಇಲ್ಲ. ಇಂಥಾದ್ದು ಎಲ್ಲಾದರೂ ಆಗಿದ್ದರೆ ಒಂದು ನಿದರ್ಶನವನ್ನು ಕೊಡಿ. ಅವಕಾಶವನ್ನು ಕೊಡುವುದು ಬೇಡವೆಂದು ನಾನು ಹೇಳುವುದಿಲ್ಲ. ಆದರೆ ನ್ಯಾಯಾಂಗ ತನಿಖೆ ಆದಮೇಲೆ, ಅದರ ವರದಿ ಬಂದಮೇಲೆ, ಯಾರದ್ದು ತಪ್ಪು ಎಂದು ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳುತ್ತಿರುವುದು ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗ್ಡೆ.—ನಮ್ಮ ಕರ್ನಾಟಕ ರಾಜ್ಯದ ಇತಿಹಾಸದಲ್ಲಾಗಲಿ ಅಥವಾ ದೇಶದ ಇತಿಹಾಸದಲ್ಲಾಗಲಿ ಅಥವಾ ಬೇರೆ ಎಲ್ಲಾದರೂ ಆಗಲಿ ಯಾವುದೇ ಸರ್ಕಾರವಾಗಲಿ ತಾನಾಗಿಯೇ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿರತಕ್ಕ ಉದಾಹರಣೆ ಇದ್ದರೆ ಕೊಡಿ. ಆದರೆ ಈ ರೀತಿ ಮಾತನಾಡುವುದು ಸರಿಯಲ್ಲ. ಇದಕ್ಕೆ ಒಂದು ಕಾಯಿದೆ, ನಿಯಮಾವಳಿ ಇರಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯ ಬಗ್ಗೆ ಮಾತನಾಡುವುದಕ್ಕೆ ಮಾನ್ಯ ಕೃಷ್ಣನ್‌ರವರ ಹೆಸರನ್ನು ನಾನು ಕರೆದಿದ್ದೇನೆ.

ಶ್ರೀ ಎಂ. ರಘುಪತಿ.—ಇಂಥ ಘಟನೆಗಳು ಆದಾಗ ಕೂಡಲೇ ನಮ್ಮ ಸರ್ಕಾರ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದೆ. ಹಿಂದಿನ ಸರ್ಕಾರಗಳು ಈ ರೀತಿ ತಾವೇ ಮುಂದೆ ಬಂದು ತನಿಖೆಗೆ ಆಜ್ಞೆ ಮಾಡಿರುವರೇ ? ಹಾಗಿದ್ದರೆ, ಆದರ ಬಗ್ಗೆ ಒಂದೇ ಒಂದು ನಿದರ್ಶನವನ್ನು ತೋರಿಸಲಿ. ಈ ರೀತಿ ಇಲ್ಲಿ ಸುಮ್ಮನೆ ಕೂತು ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಎಸ್ ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಗಮನಸೆಳೆಯುವ ಸೂಚನೆಯ ಬಗ್ಗೆ ಮಾತನಾಡುವುದಕ್ಕೆ ಮುಂಚಿತವಾಗಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ತಾವು ಏನು ಹೇಳಿದಿರಿ ಎಂದರೆ ಈ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೇನೆ, ಆದರೆ ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ, ಎಂದು, ನನಗೆ ತಿಳಿದ ಪಂಟ್ಟಿಗೆ ಹೊಸ ರೂಲ್ಸ್ ಪ್ರಕಾರ ಒಂದು ಗಂಟೆಯನ್ನು ಇದಕ್ಕಾಗಿ ವಿಂಗಡಿಸಲಿಟ್ಟು ಚರ್ಚೆ ಮಾಡಬಹುದು ಎಂದು ಹೇಳಿದ್ದೀರಿ. ಆದರೆ ಕಾಲಿಂಗ್ ಅಟೆನ್‌ಷನ್...

ಅಧ್ಯಕ್ಷರು.—ಚರ್ಚೆ ಎಂದರೆ ಯಾವ ಅರ್ಥ? ಸಾಮಾನ್ಯವಾದ ಅರ್ಥದಲ್ಲಿ ಚರ್ಚೆ ಎಂದು ನಾವು ಹೇಳುತ್ತೇವೆ.

ಶ್ರೀ ಹೆಚ್. ಗಂಗಾಧರನ್.—ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ ವೆಂದು ಈಗಾಗಲೇ ತಾವು ಅಪ್ಪಣೆ ಕೊಟ್ಟಿದ್ದೀರಿ, ರಾಜ್ಯಪಾಲರ ಭಾಷಣದಮೇಲೆ ಚರ್ಚೆ ಮಾಡು ವುದಕ್ಕೆ, ಮಾತನಾಡುವುದಕ್ಕೆ ಚರ್ಚೆ ಎಂದು ಹೇಳಬಹುದು. Why are you restricting the meaning?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತುಂಬಾ ಸಂತೋಷ. ನಾನು ರೂಲ್ಸ್ ಮಾತ್ರ ಓದಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ತಾವು ತೀರ್ಮಾನ ಕೊಡುವುದು ಒಂದು, ಆದರೆ ಈ ಮನೆಯಲ್ಲಿ ನಡೆಯತಕ್ಕಂಥ ವಿದ್ಯಮಾನಗಳೇ ಬೇರೆಯಾದರೆ ಸರಿಯಾದ ನ್ಯಾಯ ಸಿಗುವುದಿಲ್ಲ. ಬೇರೆ ಯಾವುದೋ ರೀತಿಯಲ್ಲಿ ಈ ಪ್ರಶ್ನೆಯ ಚರ್ಚೆಗೆ ಅವಕಾಶ ಕೊಡುತ್ತಿದ್ದೀರಿ. ಗಮನ ಸೆಳೆಯುವ ಸೂಚನೆಯಾಗಿ ಪ್ರಶ್ನೆಯನ್ನು ತೆಗೆದುಕೊಂಡು ಚರ್ಚೆಗೆ ಅವಕಾಶಕೊಟ್ಟು ಇದನ್ನು ಅಷ್ಟಕ್ಕೆ ಸೀಮಿತ ಗೊಳಿಸಿ ವಿಚಾರವನ್ನು ಮುಕ್ತಾಯಗೊಳಿಸುವ ಪ್ರಯತ್ನ ಒಂದು ಕಡೆಯಾದರೆ ಇನ್ನೊಂದುಕಡೆ ಸರ್ಕಾರ ಮುಕ್ತ ಮನಸ್ಸಿನಿಂದ ನ್ಯಾಯಾಂಗ ವಿಚಾರಣೆಯನ್ನು ನಡೆಸುತ್ತದೆ ಎಂದು ತಾವು ಕೂಡ ಹೇಳಿದ್ದೀರಿ. ನಾವೂ ಕೂಡ ಕೇಳಿದ್ದೇವೆ. ಅದು ಎರಡು ಮೂರು ದಿವಸಗಳು ಸಮಯ ಹೋದಮೇಲೆ. ಆದ್ದರಿಂದ ನನ್ನದೊಂದು ವಿನಂತಿ ಏನೆಂದರೆ ನೀವು ಏನು ತೀರ್ಪನ್ನು ಕೊಡುತ್ತೀರಿ ಅದಕ್ಕೆ ನಾವು ಬದ್ಧ ರಾಗಿರುತ್ತೇವೆ. ನೀವು ಕೊಟ್ಟಂಥ ತೀರ್ಪಿಗೂ, ಮತ್ತು ನೀವು ಚರ್ಚೆಗೆ ಅವಕಾಶ ಕೊಡತಕ್ಕಂಥದ್ದಕ್ಕೂ ಯಾವರೀತಿಯಾದ ಹೊಂದಾಣಿಕೆಯಾಗುವುದಿಲ್ಲ. ಸರ್ಕಾರಕ್ಕೆ ಧೈರ್ಯವಿದ್ದರೆ ಮುಕ್ತ ಮನಸ್ಸಿನಿಂದ ಚರ್ಚೆ ಮಾಡಲಿ. ಅವರು ಚರ್ಚೆಗೆ ಏತಕ್ಕೆ ಅಡ್ಡಿಬರುತ್ತಾರೆಂದು ನಾನು ಕೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಏನೋ ಹೇಳಬೇಕೆಂದು ಹೇಳುತ್ತಿದ್ದಾರೆ. ದಯವಿಟ್ಟು ಅದನ್ನು ಕೇಳಿ. ಶಾಸನ ಸಭೆಯಲ್ಲಿ ಕೆಲವು ನಿಯಮಾವಳಿಗಳು ಇರುತ್ತದೆ. ಆ ನಿಯಮಾವಳಿ ಗನುಗುಣವಾಗಿ ನಡೆಯಬೇಕಾಗಿರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ ನನ್ನದೊಂದು ಮನವಿ ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸಲಿಚ್ಛಿಸುವುದೇನೆಂದರೆ ಚರ್ಚೆಗೆ ನಾನು ವಿರೋಧ ಮಾಡುತ್ತಿಲ್ಲ. ಅವರು ಹೇಳಿದರು ಮುಕ್ತ ಚರ್ಚೆ ಮಾಡಲು ಅವರಿಗೆ ಧೈರ್ಯವಿಲ್ಲವೆಂದು. ಧೈರ್ಯ ಅವರಿಂದ ಕಡ ತರಬೇಕಾಗಿಲ್ಲ. ಕೆ. ಜಿ. ಎಫ್., ನಾಗಸಮುದ್ರ, ಗೆಜ್ಜಲಗೆರೆ, ದೊಡ್ಡಹಳ್ಳಿಯಲ್ಲಿ ಫೈರಿಂಗ್ ನಡೆದಾಗ ತಾವು ಏನು ಮಾಡಿದಿರಿ. ಈ ನಾಲ್ಕು ಕಡೆಗಳಲ್ಲಿ ಪೋಲೀಸ್ ಫೈರಿಂಗ್ ನಡೆದ ಸಂಧರ್ಭದಲ್ಲಿ ನಿಲುವಳಿ ಸೂಚನೆಯನ್ನು ತಂದಾಗ ಮುಕ್ತ ಮನಸ್ಸಿನಿಂದ ಚರ್ಚೆಗೆ ಅವಕಾಶ ಮಾಡಿಕೊಡುವಂಥ ಮನಸ್ಸು ಆವತ್ತು ಎಲ್ಲಿ ಹೋಗಿತ್ತು? ನೀವು ಮನಸ್ಸು ಮಾಡಿದಿರೇನು? ಆದ್ದರಿಂದ ದಯವಿಟ್ಟು ಜಾಗ ಬದಲಾವಣೆಯಾಗಿದೆ ಎಂದ ಹೇಳಿ ಜಾರಿಕೆಯುವಂಥ ಅಗತ್ಯವಿಲ್ಲ. ನಾನು ಹೇಳುತ್ತೇನೆ ಈವತ್ತಿನವರೆಗೂ ಅಂಥ ಒಂದು ಉದಾಹರಣೆಯನ್ನು ತೋರಿಸಿ. ಮಾನ್ಯ ಮುಖ್ಯಮಂತ್ರಿಗಳು ಘಟನೆ ನಡೆದಂಥ ಸ್ಥಳಕ್ಕೆ ಹೋಗಿ ಪರಿಶೀಲಿಸಿ? ನ್ಯಾಯಾಂಗ ತನಿಖೆ ಮಾಡುತ್ತೇವೆಂದು ನಿರ್ಣಯ ಮಾಡಿದ್ದು ತೋರಿಸಿ? ಆದ್ದರಿಂದ ನಾನು ಚರ್ಚೆಗೆ ವಿರೋಧ ಮಾಡುವುದಿಲ್ಲ, ನ್ಯಾಯಾಂಗ ತನಿಖೆಯಾದ ಮೇಲೆ ಅದರ ವರದಿ ಬಂದ ಮೇಲೆ ಅದನ್ನು ಈ ಸದನದ ಮುಂದೆ ಮಂಡಿಸುತ್ತೇನೆ. ಅನಂತರ ಅದರ ಮೇಲೆ ಚರ್ಚೆ ಮಾಡಿ, ಒಂದು ದಿವಸ ಚರ್ಚೆ ಮಾಡಿ, ಎರಡು ದಿವಸ ಚರ್ಚೆಮಾಡಿ, ನಿಮ್ಮ ಹೊಟ್ಟೆ ತುಂಬುವವರೆಗೂ ಚರ್ಚೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಗಳು ಈ ಸದನವನ್ನು ಅಪಹಾಸ್ಯ ಮಾಡುತ್ತಿದ್ದಾರೆ. ಚರ್ಚೆ ಮಾಡಿ ಎಂದು ಹೇಳತಕ್ಕಂಥ ಸಂದರ್ಭದಲ್ಲಿ ನಿಮ್ಮ ಹೊಟ್ಟೆತುಂಬ ಚರ್ಚೆ ಮಾಡಿ ಎಂದು ಹೇಳಿ ಅಪಹಾಸ್ಯ ಮಾಡುತ್ತಿದ್ದಾರೆ. ಈ ರೀತಿ ಅಪಹಾಸ್ಯ ಮಾಡುವುದಕ್ಕೆ ಹೋಗ ಬಾರದು.

ಅಧ್ಯಕ್ಷರು.--ಈಗ ನಿಲುವಳಿ ಸೂಚನೆಯಮೇಲೆ ಚರ್ಚೆ ಮಾಡತಕ್ಕಂಥದ್ದು ಮುಗಿದುಹೋಗಿದೆ. ನಾನು ಈಗಾಗಲೇ ತೀರ್ಪನ್ನು ಕೊಟ್ಟಿದ್ದೇನೆ. ಆದರವೇಲೆ ಮತ್ತೆ ಚರ್ಚೆ ಮಾಡತಕ್ಕಂಥದ್ದು ಸದನಕ್ಕೆ ಗೌರವ ತರತಕ್ಕಂಥದ್ದಲ್ಲ. ನಾವು ಕೆಲವೊಂದು ನೀತಿಗೆ ಬದ್ಧರಾಗಿರಬೇಕು. ಅದಕ್ಕೆ ಭಿನ್ನ ತರಲಾಗದು. ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರನ್ನು ಗಮನ ಸೆಳೆಯಂವ ಸೂಚನೆ ಬಗ್ಗೆ ಕರೆದಿದ್ದೇನೆ. ಅವರು ಗಮನ ಸೆಳೆಯಲಿ. ಆದರ ಬಗ್ಗೆ ಚರ್ಚೆ ಮಾಡೋಣ.

SRI BHEEMANNA KHANDRE.--I have raised a point of order.

MR. SPEAKER.--Under what rules ?

ಶ್ರೀ ಭೀಮಣ್ಣ ಖಂಡ್ರೆ.--ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಇದರ ಬಗ್ಗೆ ಚರ್ಚೆಯಾಗ ಬೇಕು ಎನ್ನುವುದರಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲವೆಂದು. ಹಾಗೆಯೇ ತಾವೂ ಕೂಡ ಚರ್ಚೆಗೆ ಅಡ್ಡಿ ಇಲ್ಲವೆಂದು ಹೇಳಿದಿರಿ. ಆದರೆ ಈಗ ತಂದಿರತಕ್ಕಂಥ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಮಾಡಲು ಅವಕಾಶವಿಡಿಯೆಂದು ಹೇಳಿದರೆ ಇದು ಯಾವರೀತಿ ಇದೆಯೆಂದರೆ ಸತ್ಯವಾನ ಸಾವಿತ್ರಿಗೆ ಯಮಧರ್ಮ ರಾಯನು ವರವನ್ನು ಕೊಟ್ಟಂತಿದೆ. ಸತ್ಯವಾನನನ್ನು ಬಿಟ್ಟು ಬೇರೆ ಏನಾದರೂ ವರವನ್ನು ಕೇಳು ಕೊಡುವೆ ಎಂದು ಯಮಧರ್ಮ ಹೇಳಿದಂತಾಗಿದೆ. ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದರಿಂದ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.--ಗಮನ ಸೆಳೆಯುವ ಸೂಚನೆಯು ಕೂಡ ಚರ್ಚೆಯು ಒಂದು ಅಂಗ. ಆ ಒಂದು ಅಂಗವನ್ನು ಗಮನದಲ್ಲಿಟ್ಟುಕೊಂಡು ಚರ್ಚೆಗೆ ಎಷ್ಟು ಸೀಮಿತವೋ ಆ ಸೀಮಿತದೊಳಗೆ ಚರ್ಚೆ ಮಾಡೋಣ. ಈಗ ಮಾನ್ಯ ಎಂ. ಎಸ್. ಕೃಷ್ಣನ್‌ರವರೇ ತಾವು ಪ್ರಸ್ತಾಪಮಾಡಿ.

ಶ್ರೀ ಎಸ್. ಬಂಗಾರಪ್ಪ.--ಗಮನ ಸೆಳೆಯುವ ಸೂಚನೆಯ ಬಗ್ಗೆ ಒಂದೇ ಒಂದು ವಿಚಾರವನ್ನು ಪ್ರಸ್ತಾಪಮಾಡಂತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು, ಆದನ್ನು ನಾನು ಸ್ವಾಗತ ಮಾಡುತ್ತೇನೆ. ಆದು ಏನೆಂದರೆ ಜ್ಯುಡೀಷಿಯಲ್ ಎನ್‌ಕ್ವಯರಿ ಆಗಬೇಕು. ಅದು ಆದಮೇಲೆ ರಿಪೋರ್ಟ್ ಬರುತ್ತದೆ. ಆದರವೇಲೆ ಚರ್ಚೆ ಮಾಡಲು ಆಗುತ್ತದೆಂದು ಹೇಳಿದರು. ರೂಲ್ ನಂಬರ್ ೬೩ ಓದಿ ಹೇಳಿದರು. ಆದನ್ನು ಕೂಡ ನಾನು ಒಪ್ಪುತ್ತೇನೆ. ಈಗ ವಾಸ್ತವಿಕವಾಗಿ ನಮ್ಮ ಮುಂದೆ ನಿಲುವಳಿ ಸೂಚನೆಯನ್ನು ಮಂಡನೆಯೇ ಮಾಡಿಲ್ಲ. ನಾವು ಈಗ ಏನು ಕೇಳುತ್ತಿರುವುದೆಂದರೆ ಮೋಷನ್ ಮೂವ್ ಮಾಡುವುದಕ್ಕೆ ಒಪ್ಪಿಗೆ ಕೊಡಿ ಎಂದಷ್ಟೆ. ತಾವು ಒಪ್ಪಿಗೆ ಕೊಟ್ಟರೆ ರೂಲ್ ನಂಬರ್ ೬೩ ಪ್ರಕಾರ ಚರ್ಚೆಗೆ ತೆಗೆದುಕೊಳ್ಳಬಹುದು. ಆದ್ದರಿಂದ ಇಲ್ಲಿ ಇದನ್ನು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಕೆಲವು ಹಂತಗಳು ಇರುವುದರಿಂದ ಈ ಒಂದು ಪ್ರಯತ್ನ ಮಾಡಲಾಯಿತು. ಚರ್ಚೆ ಮಾಡಲು ಮೂರು ಹಂತಗಳಿವೆ. ನ್ಯಾಯಾಂಗ ತನಿಖೆಯಾದಮೆಲೆ ಆದರ ವರದಿ ಆಧಾರದ ಮೇಲೆ ಚರ್ಚೆ ಮಾಡುವುದು ಬೇರೆ. ಆದರೆ ಈಗ ಚರ್ಚೆ ಮಾಡುವುದು ಬೇರೆ. ಆದ್ದರಿಂದ ಮಾನ್ಯ ಅಧ್ಯಕ್ಷರು ತಮ್ಮ ತೀರ್ಪನ್ನು ಸ್ವಲ್ಪ ಬದಲಾವಣೆ ಮಾಡಿ, ಸ್ವಲ್ಪ ಸರಿಪಡಿಸಿಕೊಂಡು ಬೇರೆ ನಿಯಮಾವಳಿಗಳ ಪ್ರಕಾರ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾನು ಮತ್ತು ನನ್ನ ಮಿತ್ರರು ಒತ್ತಾಯ ಮಾಡುತ್ತೇವೆ.

೨-೩೦ ಪಿ. ಎಂ.

ಶ್ರಿ ಎಂ. ವೀರಪ್ಪ ಮೊಯ್ಲಿ.--ಮಾನ್ಯ ಅಧ್ಯಕ್ಷರೆ, ಇಂತಹ ಒಂದು ಗಂಭೀರವಾದಂಥ ಪ್ರಸಂಗದ ಬಗ್ಗೆ ಇಲ್ಲಿ ಮುಕ್ತವಾಗಿ ಚರ್ಚೆ ಮಾಡಲು ತಾವು ಒಪ್ಪದೆ ಕೇವಲ ಗಮನ ಸೆಳೆಯುವ ಸೂಚನೆ ಮೂಲಕ ಇದನ್ನು ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಟ್ಟು ವಿಷಯದ ಗಂಭೀರತೆಯನ್ನು ಕುಂಠಿತ ಗೊಳಿಸಿ ಈ ಸದನದಿಂದ ಮರೆಮಾಚುವುದು ಸರಿಯಾದ ಕ್ರಮವಲ್ಲ. ತಾವು ಮುಕ್ತ ಚರ್ಚೆಗೆ ಅವಕಾಶ ಕೊಟ್ಟರೆ ನಾವು ಖಂಡಿತವಾಗಿಯೂ ಸಹಕಾರ ನೀಡುತ್ತೇವೆ. ಆದರೆ ತಾವು ಈಗಾಗಲೇ ಇದರ ಬಗ್ಗೆ ಸಂಪೂರ್ಣ ಚರ್ಚೆಯಾಗುವುದನ್ನು ಮೊಟಕುಗೊಳಿಸಿ ಗಮನ ಸೆಳೆಯುವ ಸೂಚನೆ ಮೂಲಕ ಇದನ್ನು ಪ್ರಸ್ತಾಪ ಮಾಡಲು ಮಾನ್ಯ ಸದಸ್ಯರಿಗೆ ಅನುಮತಿ ಕೊಟ್ಟಿದ್ದೀರಿ. ಗೋಲಿಬಾರ್ ಮಾಡುವುದಿಲ್ಲವೆಂದು ಹೇಳಿದಂಥ ಸರ್ಕಾರವೇ ಗೋಲಿಬಾರ್ ಮಾಡಿದೆ. ಈಗ ಇದರ ಬಗ್ಗೆ ಸಂಪೂರ್ಣ ಚರ್ಚೆ ಮಾಡಲು ಸರ್ಕಾರ ಒಪ್ಪುತ್ತಿಲ್ಲ. ಆದ್ದರಿಂದ ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾವು ಹೊರಗಡೆ ಹೋಗುತ್ತೇವೆ.

(ಕೆಲವು ಸದಸ್ಯರು ಸಭಾತ್ಯಾಗ ಮಾಡಿದರು)